

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 37 ಸಂಚಿಕೆ 3 KARMUL/2021/79912 BENGALURU ಅಕ್ಟೋಬರ್–ಡಿಸೆಂಬರ್ 2024 ಬೆಲೆ:ರೂ. 10/–



ಕಲ್ಕಿ ಅವತಾರ



ತುಳಸೀ ಸಂಕೀರ್ತನೆ

**ಮುಂದಿನ ಕಾರ್ಯಕ್ರಮ**

**ಕ್ರೀಡಾ ಮಿಲನ 19.01.2025**

**ವಾರ್ಷಿಕೋತ್ಸವ 23.02.2025**



ಕಾಶಿ ಪ್ರವಾಸದಲ್ಲಿ



ಒಂದು ದಿನದ ಪ್ರವಾಸ

*With best compliments from*

# TEDMAG
# ENGINEERING & MANAGEMENT CONSULTANTS (P) LTD.

Swagat, 1209, 11th Cross
HSR Layout Sector I, Bangalore – 560 102
Tel.: +91 (0)80 22586129
Fax: +91 (0)80 22589134

**E-mail:**
Bangalore : tedmagemc@hotmail.com
sridhar_bhat@yahoo.com
Chennai : myram47@gmail.com
Mumbai : mindi1940@yahoo.com

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

**ಭೃಗುವಾಣಿ**
**ಆನಂದ ಬಳಗದ ತ್ರೈಮಾಸಿಕ ಪತ್ರಿಕೆ**
**ಸಂಪುಟ 37** **ಸಂಚಿಕೆ 03**

**ಅಧ್ಯಕ್ಷರು**
ಬಾಳೆಕುದ್ರು ರಾಮಚಂದ್ರ ಉಪಾಧ್ಯ

**ಕಾರ್ಯದರ್ಶಿ**
ಎಂ. ಸತ್ಯನಾರಾಯಣ ಭಟ್

**ಸಂಪಾದಕರು**
ಮರೋಳಿ ಕೃಷ್ಣ ಪ್ರಸಾದ್

**ಸಂಪಾದಕ ಮಂಡಳಿ**
ಎಸ್. ಹರಿದಾಸ ಉಪಾಧ್ಯ
ಕೆ.ಎನ್. ಅಡಿಗ

**ವರದಿ ಲೇಖನ ಸಹಕಾರ**
ಟಿ.ಎಸ್.ನಾಗರಾಜ ಉಪಾಧ್ಯಾಯ
ಡಾ. ವೀಣಾ ಶರತ್
ಡಿ. ಶರತ್ ಕುಮಾರ್

**ಜಾಹೀರಾತು ಸಮನ್ವಯ**
ಗೋಪಾಲಕೃಷ್ಣ ಕುಂಜತ್ತಾಯ
ಎಂ.ಕೆ. ಗುರುಮೂರ್ತಿ
ವೈ. ಜಯಂತ್ ರಾವ್


**ಛಾಯಾಗ್ರಹಣ**
ಮಟ್ಟಿ ರಾಮಚಂದ್ರ ರಾವ್

**ಪ್ರಸರಣ ಸಹಕಾರ**
ರಂಜಿತ್ ಯಡಪಡಿತ್ತಾಯ

ವಿಳಾಸ
**ಆನಂದ ಬಳಗ**
ಆನಂದ ಸಭಾಗೃಹ, ನಂ. 23,
ಗೊಲ್ಲಹಳ್ಳಿ, ಬನ್ನೇರಘಟ್ಟ ಮುಖ್ಯರಸ್ತೆ
ಬನ್ನೇರುಘಟ್ಟ,
ಬೆಂಗಳೂರು–560 083

website
www.anandabalaga.org

# ಅಧ್ಯಕ್ಷರ ನುಡಿ



**ಹರಿಃಓಂ**

ಆನಂದ ಬಳಗದ ಬಂಧುಗಳಿಗೆಲ್ಲ ಹಾರ್ದಿಕ ಶುಭಹಾರೈಕೆಗಳು. 2025ರ ಆಂಗ್ಲ ಕ್ಯಾಲೆಂಡರ್ ವರ್ಷಕ್ಕೆ ಸ್ವಾಗತ ಕೋರೋಣ.

ಅವಿಭಜಿತ ದಕ್ಷಿಣ ಕನ್ನಡವೆಂದರೆ ಉಡುಪಿಯೂ ಸೇರಿದ ಕರಾವಳಿಯ ಭಾಗ. ಇದನ್ನು ತುಳುನಾಡೆಂದೂ ಗುರುತಿಸುವುದುಂಟು. ಕಾಸರಗೋಡಿನ ಅನೇಕ ಕನ್ನಡ ಮತ್ತು ತುಳು ಭಾಷೆಯನ್ನಾಡುವ ಮಂದಿಯೂ ತಮ್ಮನ್ನು ದಕ್ಷಿಣ ಕನ್ನಡಿಗರೆಂದೇ ಗುರುತಿಸಿಕೊಳ್ಳಲು ಇಷ್ಟಪಡುತ್ತಾರೆ. ಈಗಿನ ದಕ್ಷಿಣ ಕನ್ನಡಕ್ಕೆ ಒಂದರ್ಥ ಕಾಸರಗೋಡು ಮತ್ತು ಉಡುಪಿಯೂ ಸೇರುವಂತಹ ಸೀಮಿತ ಪ್ರದೇಶದಿಂದ ಬಂದು ಬೆಂಗಳೂರಿನಲ್ಲಿ ನೆಲೆಗೊಂಡ ಪರಿಮಿತ ವಿಪ್ರಸಮುದಾಯದ ಮಂದಿ ಸುಮಾರು ನಾಲ್ಕು ದಶಕಗಳ ಹಿಂದೆ ಆನಂದ ಬಳಗವೆಂಬ ಸಸಿಯನ್ನು ನೆಟ್ಟರು.

ಬೆಂಗಳೂರು ನಾಲ್ಕೂ ದಿಕ್ಕುಗಳಲ್ಲಿ ಬೆಳೆದಂತೆ, ಇಲ್ಲಿಗೆ ಬಂದು ನೆಲೆಯಾಗುವ ಜನಸಂಖ್ಯೆ ಹೆಚ್ಚಾದಂತೆ ಇಲ್ಲಿ ನಮ್ಮ ಕರಾವಳಿಯ ಮೂಲದ ಬ್ರಾಹ್ಮಣ ಸಮುದಾಯದ ಸಂಖ್ಯೆಯೂ ವರ್ಧಿಸುತ್ತಾ ಬಂದಂತೆ ಆನಂದ ಬಳಗವೂ ಅತ್ತಿ, ಅರಳಿ, ಆಲದ ಮರಗಳಂತೆ ತನ್ನ ರೆಂಬೆಕೊಂಬೆಗಳನ್ನು ಚಾಚುತ್ತಾ ವಿಸ್ತರಿಸತೊಡಗಿತು. ಹತ್ತು, ನೂರು ಸಂಖ್ಯೆಗಳಲ್ಲಿದ್ದ ಆನಂದ ಬಳಗದ ಸದಸ್ಯರ ಸಂಖ್ಯೆ ಈಗ ಎರಡೂವರೆ ಸಾವಿರದ ಅಸುಪಾಸಿನಲ್ಲಿದೆ ಎಂಬುದು ನಮಗೆ ಅಭಿಮಾನದ ಸಂಗತಿ. ನೆಲದಡಿಯಲ್ಲಿ ಹೊಸ ಹುಟ್ಟು ಪಡೆಯುವ ಬೀಜ ಗಿಡವಾಗಿ, ಮರವಾಗಿ, ಆಕಾಶದಗಲಕ್ಕೆ ಚಾಚುತ್ತಾ ಬೆಳೆದಂತೆ, ಅನೇಕ ಮೃಗಪಕ್ಷಿ, ಕ್ರಿಮಿಕೀಟಗಳಿಗೆ ನೆರಳಾಗುವಂತೆ, ಆಸರೆಯಾಗುವಂತೆ ನಮ್ಮ ಬಳಗವೂ ಹತ್ತು ಹಲವು ರೆಂಬೆಕೊಂಬೆಗಳನ್ನು ಪಡಿಮೂಡಿಸಿಕೊಂಡು ತನ್ನ ಸದಸ್ಯರ ಅಗತ್ಯಗಳಿಗೆ, ಆಶಯಗಳಿಗೆ ಸ್ಪಂದಿಸುತ್ತಿರುವುದು ಉಲ್ಲೇಖನೀಯ ಸಂಗತಿ.

ಆನಂದ ಬಳಗದಲ್ಲೀಗ ಪ್ರಧಾನ ನಿರ್ವಹಣಾ ಸಮಿತಿಯಲ್ಲದೆ, ಹತ್ತು ಹಲವು ವಿವಿಧ ಸಮಿತಿಗಳಿದ್ದು, ವಾರ್ಷಿಕವಾಗಿ ಸುಮಾರು ಇಪ್ಪತ್ತರಷ್ಟು ವೈವಿಧ್ಯಮಯ ಕಾರ್ಯಕ್ರಮಗಳನ್ನು ಸದಸ್ಯರಿಗೆ ಕಟ್ಟಿಕೊಡುತ್ತಿವೆ. ಇತ್ತೀಚೆಗೆ ಇಪ್ಪತ್ತೈದು ವರ್ಷಗಳನ್ನು ಪರಿಪೂರ್ಣಗೊಳಿಸಿದ ಬಳಗದ ಮಹಿಳಾ ವಿಭಾಗವು ವಧು ವರಾನ್ವೇಷಣಾ ಕೇಂದ್ರವನ್ನು ಅನೇಕ ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬಂದಿರುವುದು ಶ್ಲಾಘನೀಯ.

ಯಾವುದೇ ಒಂದು ವಿಷಯದಲ್ಲಿ ಆಸಕ್ತಿಯನ್ನು ಹೊಂದಿದವರು ಕೂಡಾ ಕನಿಷ್ಟವೆಂದರೂ ವರ್ಷಕ್ಕೆ ನಾಲ್ಕಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಮನಸ್ಸು ಮಾಡಿಯೇ ಮಾಡುವಂತಹ ಆಕರ್ಷಣೆಯನ್ನು ಆನಂದ ಬಳಗವು ಹೊಂದಿದೆ.

'ಹತ್ತು ಜನ ಸೇರಿದರೆ ಮುತ್ತಿನಂತಹ ಕಾರ್ಯ' ಎಂಬಂತೆ ಈ ಬಳಗದ ಬೆಳವಣಿಗೆ ಒಬ್ಬಿಬ್ಬರಿಂದಾದುದಲ್ಲ. ಈವರೆಗೆ ಬಳಗವನ್ನು ಮುನ್ನಡೆಸಿದ, ಮಾರ್ಗದರ್ಶನ ನೀಡಿದ, ಹಿರಿಯರ, ಪದಾಧಿಕಾರಿಗಳ, ಕಾರ್ಯಕಾರಿ ಸಮಿತಿ ಸದಸ್ಯರ, ಸರ್ವಸದಸ್ಯರ ಪರಿಶ್ರಮ ಸಹಕಾರ, ಬೆಂಬಲ, ದಾನ ದೇಣಿಗೆಗಳ ಕಾರಣದಿಂದ ಬಳಗವು ಈ ಮಟ್ಟಕ್ಕೆ ಬೆಳೆದಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

2025ರಲ್ಲಿ ಬಳಗದ ಕಾರ್ಯವೈಖರಿಯು ಮತ್ತಷ್ಟು ಪ್ರಖರವಾಗಲಿ, ಸಮಾಜದ ಪುರೋಭಿವೃದ್ಧಿಗೆ ಪೂರಕವಾಗಲಿ, ಸಹಕಾರಿಯಾಗಲಿ. ಬಳಗದೊಂದಿಗೆ ನಾವು ಒಗ್ಗಟ್ಟಿನಿಂದ ಮುನ್ನಡೆಯೋಣ ಎಂದು ಹಾರೈಸುವೆ.

**ಬಾಳೆಕುದ್ರು ರಾಮಚಂದ್ರ ಉಪಾಧ್ಯ**

FRIDGE HOUSE
DELIVERING TRUST

COPELAND

# FRIDGE HOUSE

## Wholesaler & Importers

M/s Copeland India Pvt. Ltd.
M/s Gujarat Flurochemicals Ltd.
M/s Hicool Electronic Industries

DAIKIN

GFL


Scroll


Sealed


Semi Hermetic


Scroll Condensing Unit


Dixell Controls


Tie


Fan & Motor
Hicool


Split AC


Copper pipes &
Insulation Materials

EQUIPMENTS & COMPONENTS. for

*HVAC & R, *COLD ROOMS, *RIPENING CHAMBERS, *HEAT PUMPS.

Adithya Tower # 23, V.S.N Road, Shivaji Nagar, Bengaluru - 560 051.
Ph. No. 080-22861936, 22860260 & 41238022
Email : info@fridgehouse.net ; Web Site: www. fridgehouse.net
Contact Persons : M.K. Prasad & Nagesh D Prabhu - M: 9845217197



# EDITORIAL...

A warm welcome to the new year 2025. I hope you all have read July-Sept2024 issue of Bhruguvani. I have received many appreciation calls and happy that you liked our last issue. This was possible by the wholehearted participation of Balaga members in functions of balaga and Bhruguvani. I thank our editorial committee of 12 members for their selfless work to ensure Bhruguvani is presented in its best form to you. We conduct regular committee meetings of Bhruguvani and plan the layout & content of every issue.

Number of advertisers is regularly increasing. Bhruguvani is a powerful media reaching 2400 member families i.e., a readership of nearly 10,000 people. It can help members in business to build their brand and market their products. I request our members to patronize our advertisers.

We have got good response for the new columns we started namely “Nimma Anisike” and “Nammavarinda Nammavarigagi”. I request members to participate in these 2 columns in larger no’s which will encourage our initiatives. Keep sending your articles for Bhruguvani which will be published in future issues.

As I wish all our members a very happy new year 2025, it is also time to think and decide on 2/3 important goals to achieve in 2025, be it health,financial, skill learning etc.  Generally, we write our goals in the first week of the year with great enthusiasm, but it fizzles out in a month or so. This year let us be firm on our goals. I have a few tips to implement and achieve goals,  Divide your goal into 12 parts and ensure you achieve 1/12th of your annual goal every month. If not we postpone everything to the 12th month and then realize the goal is not achievable.  The next important thing is to have winning habits to achieve the goals, for example if you want to reduce your weight develop the habit of doing exercise or going for a one hour walk every day.  Any action you do repeatedly for 28 days becomes a habit and habit makes work happen automatically without strain.Remember one golden rule to form habits i.e., “consistency beats intensity” in the long run,if you have decided to go for one hour morning walk never miss the schedule, even if you are tired go for a walk at least 15 minutes but don’t miss your walk & this action will help you build winning habits.

Let us all participate in the forthcoming Ananda Balaga “Kreeda Milana” and “Annual Day Celebrations. I wish the children of our members good performance in the ensuing annual exams. Happy Makara Sankramana, Mahashivarathri and Ugadi to all members.

**M. Krishna Prasad**

# ಆನಂದ ಬಳಗ (ರಿ.)

ಆನಂದ ಸಭಾಗೃಹ, ನಂ. 23, ಗೊಲ್ಲಹಳ್ಳಿ, ಬನ್ನೇರಘಟ್ಟ ಮುಖ್ಯರಸ್ತೆ, ಬನ್ನೇರುಘಟ್ಟ, ಬೆಂಗಳೂರು-560 083

## ಆನಂದ ಬಳಗದ ವಾರ್ಷಿಕೋತ್ಸವ ಆಮಂತ್ರಣ

ಆತ್ಮೀಯರೆ, ನಮ್ಮ ಬಳಗದ 37ನೇ ವಾರ್ಷಿಕೋತ್ಸವ ದಿನಾಂಕ : 23-02-2025ನೇ ಭಾನುವಾರ ಸಂಜೆ 4.25ರಿಂದ ಬೆಂಗಳೂರು ರಾಜಾರಾಮ್ ಮೋಹನ್ ರಾಯ್ ರಸ್ತೆಯಲ್ಲಿರುವ ಹೋಟೆಲ್ ವುಡ್‌ಲ್ಯಾಂಡ್ಸ್‌ನ ಶ್ರೀಕೃಷ್ಣ ಸಭಾಂಗಣದಲ್ಲಿ ನಡೆಯಲಿದೆ

### ಕಾರ್ಯಕ್ರಮಗಳು

| | | |
|---|---|---|
| ಸಂಜೆ 4ರಿಂದ | : | ಲಘು ಉಪಾಹಾರ |
| ಸಂಜೆ 4.25ರಿಂದ | : | ಸಾಂಸ್ಕೃತಿಕ ಕಾರ್ಯಕ್ರಮ |
| ಸಂಜೆ 6.00 ರಿಂದ | : | ಸಭಾ ಕಾರ್ಯಕ್ರಮ, ಪ್ರಾರ್ಥನೆ, ಸ್ವಾಗತ, ವಾರ್ಷಿಕ ವರದಿ ವಾಚನ, ಪ್ರಶಸ್ತಿ ಪ್ರದಾನ, ಸನ್ಮಾನಿತರ ಅನಿಸಿಕೆ, ಮುಖ್ಯ ಅತಿಥಿಗಳ ಮಾತು, ಅಧ್ಯಕ್ಷರ ಭಾಷಣ, ವಂದನಾರ್ಪಣೆ |
| ರಾತ್ರಿ 8.00 ರಿಂದ | : | ಭೋಜನ ಸೌಜನ್ಯ<br>ಶ್ರೀ ಕೆ. ವಾಸುದೇವ ರಾವ್, ಶ್ರೀಮತಿ ಗೀತಾ ವಾಸುದೇವ ರಾವ್<br>ಮಾಲೀಕರು, ಹೋಟೆಲ್ ವುಡ್ ಲ್ಯಾಂಡ್ಸ್ |

ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ
ಸಮಾರಂಭದ ಸಂಭ್ರಮದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

| | | |
|---|---|---|
| ಡಾ. ರಾಮಚಂದ್ರ ಉಪಾಧ್ಯ | ಎಂ ಸತ್ಯನಾರಾಯಣ್ ಭಟ್ | ಶ್ರೀಮತಿ ಗೀತಾ ವಾಸುದೇವ ರಾವ್ |
| ಅಧ್ಯಕ್ಷರು | ಕಾರ್ಯದರ್ಶಿ | ಅಧ್ಯಕ್ಷರು, ಮಹಿಳಾ ವಿಭಾಗ |



ಮಹಿಳಾ ವಿಭಾಗದಿಂದ ತಾ. 7.11.2024ರಂದು ಉಡ್‌ಲ್ಯಾಂಡ್ಸ್ ಹೋಟೆಲ್‌ನಲ್ಲಿ ಶಾರದಾ ಪೂಜೆ ವಿಜೃಂಭಣೆಯಿಂದ ನಡೆಯಿತು. ಕಾರ್ಯಕ್ರಮದಲ್ಲಿ ಮಹಿಳಾ ವಿಭಾಗದ ಸದಸ್ಯರು ಮತ್ತು ಬಳಗದ ಕಾರ್ಯಕಾರಿ ಸಮಿತಿಯ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡರು. ಪೂಜೆಯ ನಂತರ ಮಹಿಳಾ ವಿಭಾಗದ ಸದಸ್ಯರು ದೇವರನಾಮಗಳನ್ನು ಹಾಡಿದರು. ನಂತರ ಉಪಹಾರ ವಿತರಿಸಲಾಯಿತು.



ಆನಂದ ಬಳಗ ಹಾಗೂ ಉಪಾಧ್ಯ ಮತ್ತು ಕಂಪೆನಿ ಜೊತೆಯಾಗಿ ತಾ. 10.11.2024ರಂದು ಪೂರ್ಣಿಮಾ ರೀಜೆನ್ಸಿ ಹೋಟೆಲ್‌ನಲ್ಲಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಧನ್ವಂತರಿ ಪ್ರಶಸ್ತಿ ಪ್ರದಾನ ಮತ್ತು ಉಚಿತ ಆಯುರ್ವೇದ ಆರೋಗ್ಯ ಚಿಕಿತ್ಸಾ ಶಿಬಿರ ನಡೆಸಿಕೊಟ್ಟಿತು.

# ಆನಂದ ಬಳಗ ಪ್ರಿಮಿಯರ್ ಲೀಗ್ ಕ್ರಿಕೆಟ್



ಎಂ.ಕೆ. ಗುರುಮೂರ್ತಿ

ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಕ್ರೀಡೆಗಳು ಸಹಕಾರಿಯಾಗುತ್ತವೆ. ಕ್ರೀಡೆಯೊಂದೇ ನಮ್ಮನ್ನು ಸಾಧ್ಯವಾದಷ್ಟು ಆರೋಗ್ಯವಾಗಿಟ್ಟುಕೊಳ್ಳಬಹುದಾದ ಸುಂದರ ಮಾರ್ಗವಾಗಿದೆ. ಬಳಗದ ಸದಸ್ಯರಲ್ಲಿ ಕ್ರೀಡಾ ಮನೋಭಾವ ಮತ್ತು ದೈಹಿಕ ಸಧೃಡತೆಯನ್ನು ಉತ್ತೇಜಿಸುವುದು ಬಳಗದ ಗುರಿ.

ಆನಂದ ಬಳಗವು ಆರು ವರ್ಷಗಳ ಬಳಿಕ ಬಳಗದ ಜನಪ್ರಿಯ ಕಾರ್ಯಕ್ರಮವಾದ ಆನಂದ ಬಳಗ ಪ್ರಿಮಿಯರ್ ಲೀಗ್ 2024ರ ಕ್ರಿಕೆಟ್ ಪಂದ್ಯಾವಳಿಗಳನ್ನು ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ಬೆಂಗಳೂರು ಇಂಟರ್‌ನ್ಯಾಷನಲ್ ಸ್ಕೂಲ್ ಮೈದಾನದಲ್ಲಿ ನವೆಂಬರ್ 24, 2024 ಭಾನುವಾರ ಹಮ್ಮಿಕೊಳ್ಳಲಾಗಿತ್ತು.

ಬೆಳಗ್ಗಿನ 6.30ರ ಚುಮು ಚುಮು ಚಳಿಯಲ್ಲೂ ಬಳಗದ ಕ್ರೀಡಾಪಟುಗಳು ಮತ್ತು ಸದಸ್ಯರು ಈ ಕ್ರೀಡೋತ್ಸವದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. 2014, 2016 ಮತ್ತು 2018ರಲ್ಲಿ ಆನಂದ ಬಳಗದ ಪ್ರಿಮಿಯರ್ ಲೀಗ್ ಕ್ರಿಕೆಟ್ ಪಂದ್ಯಾಟಗಳು ನಡೆದಿತ್ತು. ಬಳಗದ ಸದಸ್ಯರ ಪ್ರಾಯೋಜಕತ್ವದ ಎಂಟು ತಂಡಗಳು ಈ ಪ್ರಶಸ್ತಿಗಾಗಿ ಪೈಪೋಟಿ ನಡೆಸಿದವು. ಮೊದಲನೆಯ ಲೀಗ್ ಪಂದ್ಯ ಬೆಳಗ್ಗೆ ಏಳು ಗಂಟೆಗೆ ಪ್ರಾರಂಭವಾಯಿತು. ಮೊದಲನೆಯ ಆವೃತ್ತಿಯ ಲೀಗ್ ಪಂದ್ಯಗಳು 6 ಓವರ್‌ಗಳಾಗಿದ್ದರೆ 2ನೇ ಆವೃತ್ತಿಯ ಲೀಗ್ ಪಂದ್ಯಗಳನ್ನು 5 ಓವರ್‌ಗೆ ಸೀಮಿತಗೊಳಿಸಲಾಯಿತು. ಪ್ರತೀ ಪಂದ್ಯಕ್ಕೂ ಪಂದ್ಯ ಪುರುಷೋತ್ತಮ ಪ್ರಶಸ್ತಿಯನ್ನು ಆಗಮಿಸಿದ ಅತಿಥಿಗಳಿಂದ ಕ್ರೀಡಾಪಟುಗಳಿಗೆ ನೀಡಲಾಯಿತು.

ಆಕರ್ಷಕವಾದ ವೀಕ್ಷಕ ವಿವರಣೆ ಮತ್ತು ಪಂದ್ಯಗಳ ತೀರ್ಪುಗಾರರಾಗಿ ಪ್ರಸಾದ್ ಮತ್ತು ತಂಡದವರ ಪರಿಶ್ರಮ ಅಭಿನಂದನೀಯ ಪ್ರತೀ ಚೌಂಡರಿ, ಸಿಕ್ಸರ್ ಹಾಗೂ ವಿಕೆಟ್ ಪತನಗೊಂಡಾಗ ಚೆಂಡೆ. ಜಾಗಟೆಗಳ ಅಬ್ಬರ ಆಪ್ಯಾಯ ಮಾನವಾಗಿತ್ತು. ಬೆಳಗಿನ 4 ಬಗೆಯ ರುಚಿ ರುಚಿಯಾದ ಉಪಹಾರ, 11 ಗಂಟೆಗೆ ನಮ್ಮೂರಿನ ಬನ್ಸ್, ಮಧ್ಯಾಹ್ನ ಭರ್ಜರಿ ಭೋಜನ, ಸಾಯಂಕಾಲ ಬಿಸಿ ಬಿಸಿ ಗೋಳಿ ಬಜೆ, ನಡುನಡುವೆ ತಂಪು ಪಾನೀಯ ಹಾಗೆಯೇ ಕಾಫಿ, ಟೀ ಮತ್ತು ಬೇಕಾದಷ್ಟು ಐಸ್‌ಕ್ರೀಮ್‌ನ ವ್ಯವಸ್ಥೆಯನ್ನು ಮಾಡಲಾಗಿತ್ತು. ಇದೆಲ್ಲವೂ ಸಾಧ್ಯವಾದದ್ದು ಭಾಸ್ಕರ್ ಭಟ್ ಮತ್ತು ಅವರ ತಂಡದ ನುರಿತ ಬಾಣಸಿಗರಿಂದ.

ಕ್ರಿಕೆಟ್ ಪಂದ್ಯಾವಳಿಯ ಎಂಟು ತಂಡಗಳು ಬೇರೆ ಬೇರೆ ವಿನ್ಯಾಸದ ಬಣ್ಣದ ಟೀ ಶರ್ಟ್‌ಗಳನ್ನು ಧರಿಸಿ ತಮ್ಮ ಕುಟುಂಬದವರಿಗೂ ತೊಡಿಸಿ, ಇಡೀ ಮೈದಾನವೇ ಕಾಮನ ಬಿಲ್ಲಿನ ಬಣ್ಣದ ಜಾತ್ರೆಯಾಗಿ ತೋರುತ್ತಿತ್ತು. ಬಳಗದ 350 ಸದಸ್ಯರು ಆಗಮಿಸಿ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುತ್ತಿದ್ದರು. ಈ ಕ್ರೀಡಾಕೂಟಗಳ ಉದ್ಘಾಟನೆಯನ್ನು ಬಳಗದ ಅಧ್ಯಕ್ಷರಾದ ರಾಮಚಂದ್ರ ಉಪಾಧ್ಯರವರು ಬ್ಯಾಟಿಂಗ್ ಮಾಡುವ ಮೂಲಕ



**ಬಳಗದ ಪ್ರಾಯೋಜಕತ್ವದ ಎಂಟು ತಂಡಗಳ ವಿವರ**

| | |
|---|---|
| 1. ಐತಾಳ್ ಏಸಸ್ | ಶ್ರೀಮತಿ ಕಸ್ತೂರಿ ಐತಾಳ್ (ವಿಜೇತರು) |
| 2. ಬಾಗಿಲ್ತಾಯ ಬ್ರಿಗೇಡ್ಸ್ | ಶ್ರೀ ಪಿ.ಎಸ್. ಬಾಗಿಲ್ತಾಯ |
| 3. ಐಡಿಯಲ್ ಪಂಟರ್ಸ್ | ಶ್ರೀ ಪಿ.ಸಿ. ರಾವ್ |
| 4. ಮುಂಡ್ರುಪ್ಪಾಡಿ ಸ್ವಾಲ್‌ವಾರ್ಟ್ಸ್ | ಶ್ರೀ ಮೋಹನ್‌ರಾವ್ |
| 5. ಆರ್. ಎಸ್. ವಾರಿಯರ್ಸ್ | ಶ್ರೀಮತಿ ಶೋಭ ಮತ್ತು ಶ್ರೀ ರಾಧಾಕೃಷ್ಣ |
| 6. ರಾಯಲ್ ಅಡಿಗಳ್ಸ್ | ಶ್ರೀ ಮನೋಹರ್ ಅಡಿಗಳ್ |
| 7. ಸ್ಟೀಲ್‌ಸ್ಟಾರ್ಸ್ | ಶ್ರೀ ಭಾಸ್ಕರ್ ರಾವ್ |
| 8. ಉಪಾಧ್ಯ ಯುನಿಕಾರ್ನ್ | ಶ್ರೀ ಬಿ. ರಾಮಚಂದ್ರ ಉಪಾಧ್ಯ |

ಮತ್ತು ಬಳಗದ ಮಾಜಿ ಅಧ್ಯಕ್ಷರಾದ ಪಿ. ಸುಬ್ರಹ್ಮಣ್ಯ ಬಾಗಿಲ್ತಾಯರವರು ಬೌಲಿಂಗ್ ಮಾಡುವ ಮೂಲಕ ನೆರವೇರಿಸಿದರು. ಇವರೊಂದಿಗೆ ಬಳಗದ ಉಪಾಧ್ಯಕ್ಷರಾದ ಕೆ. ಎನ್. ಅಡಿಗ ಹಾಗೂ ಪಿ.ಸಿ. ರಾವ್‌ರವರು ಉಪಸ್ಥಿತರಿದ್ದರು. ಫೈನಲ್ ಪಂದ್ಯವು ಕಸ್ತೂರಿ ಐತಾಳ್ ನೇತೃತ್ವದ ಶ್ರೇಯಸ್ ಹೊಳ್ಳ ನಾಯಕತ್ವದ ಐತಾಳ್ ಏಸಸ್ ಮತ್ತು ರಾಧಾಕೃಷ್ಣ ಮತ್ತು ಶೋಭ ರಾಧಾಕೃಷ್ಣ ನೇತೃತ್ವದಲ್ಲಿ ನಿತೀಶ್‌ಭಟ್ ನಾಯಕತ್ವದ ಆರ್.ಎಸ್.ವಾರಿಯರ್ಸ್ ನಡುವೆ ನಡೆದು ಐತಾಳ್ ಏಸಸ್ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡಿತು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಳಗದ ಅಧ್ಯಕ್ಷರು, ಉಪಾಧ್ಯಕ್ಷರು, ಉದ್ಯಮಿ ಎನ್.ಎಸ್. ಹೊಳ್ಳ, ಯುವ ವಿಪ್ರವೇದಿಕೆಯ ಕೃಷ್ಣಮೂರ್ತಿ ಅಡಿಗ ಹಾಗೆಯೇ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಮೇಶ್ ಶಾಸ್ತ್ರಿಯವರು ಉಪಸ್ಥಿತರಿದ್ದರು. ಅಧ್ಯಕ್ಷರಾದ ರಾಮಚಂದ್ರ ಉಪಾಧ್ಯರವರು ಮಾತನಾಡಿ 'ಇಂದಿನ ಬಳಗದ ಯುವ ಪ್ರತಿಭೆಗಳೆ ಮುಂದಿನ ಆನಂದ ಬಳಗ, ನಮ್ಮ ಸಂಸ್ಕೃತಿಯನ್ನು ಒಗ್ಗೂಡಿಸಿಕೊಂಡು ಎಲ್ಲರೂ ಮುನ್ನಡೆಯಬೇಕು' ಎಂದು ಯುವ ಪ್ರತಿಭೆಗಳಿಗೆ ಕಿವಿಮಾತು ಹೇಳಿದರು.

ಸಭಾಕಾರ್ಯಕ್ರಮವನ್ನು ಬಳಗದ ಕಾರ್ಯದರ್ಶಿ ಎಂ.ಎಸ್. ಭಟ್ ಅವರು ನೆರವೇರಿಸಿದರು. ಬೆಸ್ಟ್ ಬೌಲರ್ ಆಗಿ ಕಾರ್ತಿಕ್‌ಭಟ್, ಬೆಸ್ಟ್ ಬ್ಯಾಟ್ಸ್‌ಮನ್ ಆಗಿ ವರುಣ್ ಕೇಶವ್, ಬೆಸ್ಟ್ ಫೀಲ್ಡಿಂಗ್ ಆಗಿ ರಾಹುಲ್ ಹೊಳ್ಳ ಮತ್ತು ಆನಂದ ಬಳಗದ ಪ್ರೀಮಿಯರ್ ಲೀಗ್‌ನ ಮ್ಯಾನ್ ಆಫ್ ದಿ ಸೀರಿಸ್ ಅನ್ನು ಶ್ರೇಯಸ್ ಹೊಳ್ಳ ಅವರಿಗೆ ನೀಡಲಾಯಿತು. ಅಂತಿಮವಾಗಿ ಆನಂಗ ಬಳಗದ ಪ್ರೀಮಿಯರ್ ಲೀಗ್‌ನ ಯಶಸ್ಸಿಗೆ ಕಾರಣರಾದ ಎಲ್ಲಾ ಪ್ರಾಯೋಜಕರಿಗೂ ಆನಂದ ಬಳಗ ಯುವ ವಿಭಾಗದ ಎಲ್ಲಾ ಕಾರ್ಯಕರ್ತರಿಗೂ ಬಳಗದ ಕಾರ್ಯಕಾರಿ ಸಮಿತಿಗೂ ಅನಂತ ಅನಂತ ಧನ್ಯವಾದಗಳು.

ಈ ಎಪಿಲ್ ಅನ್ನು ನಮ್ಮ ಸದಸ್ಯರು ಐಪಿಎಲ್‌ಗೆ ಹೋಲಿಸಿ ಮಾತಾನಾಡಿದಾಗ ನಮಗೂ ಧನ್ಯತಾ ಮನೋಭಾವದಿಂದ ಮುಖದಲ್ಲಿ ಮುಗುಳು ನಗುವಿನೊಂದಿಗೆ ಎಲ್ಲಾ ಸಿಹಿನೆನಪುಗಳನ್ನು ಮಸ್ತಕದಲ್ಲಿಟ್ಟುಕೊಂಡು ಮೈದಾನದಿಂದ ಭಾರವಾದ ಹೆಜ್ಜೆಯೊಂದಿಗೆ ಹಿಂತಿರುಗಿದೆವು.




ಎ.ಪಿ.ಎಲ್. ಕಾರ್ಯಕಾರಿ ಸಮಿತಿ

# ಆನಂದ ಬಳಗ (ರಿ.)

## ಯುವ ವಿಭಾಗ

ಹೋಟೇಲ್ ಅಜಂತ, ನಂ 21, ಎಂ.ಜಿ. ರಸ್ತೆ, ಬೆಂಗಳೂರು-560 001



ಆನಂದ ಬಳಗದ ವಾರ್ಷಿಕೋತ್ಸವದ ಅಂಗವಾಗಿ ದಿನಾಂಕ 19-01-2025ನೇ ಭಾನುವಾರ
ಜಯನಗರ 7ನೇ ಬ್ಲಾಕಿನ ನ್ಯಾಷನಲ್ ಕಾಲೇಜ್ ಕ್ರೀಡಾ ಮೈದಾನದಲ್ಲಿ
(ಹೆಚ್.ಎನ್. ಕಲಾಕ್ಷೇತ್ರ ಪಕ್ಕದಲ್ಲಿ)

## ಕ್ರೀಡಾ ಮಿಲನ - 2025

ಏರ್ಪಡಿಸಲಾಗಿದೆ.

ಬೆಳಿಗ್ಗೆ 9-00 ರಿಂದ ಸಂಜೆ 5-00 ರ ವರೆಗೆ ನಡೆಯಲಿರುವ ಕ್ರೀಡಾ ಮೇಳದಲ್ಲಿ ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದಲ್ಲದೆ, ತಮ್ಮ ಕುಟುಂಬದವರೊಡನೆ ಆಗಮಿಸಿ ಸ್ಪರ್ಧಾಳುಗಳನ್ನು ಪ್ರೋತ್ಸಾಹಿಸುವುದರ ಮೂಲಕ ಕ್ರೀಡಾ ಮಿಲನವನ್ನು ಯಶಸ್ವಿಗೊಳಿಸಬೇಕಾಗಿ ಕೋರಿಕೆ.

| ಬಾ. ರಾಮಚಂದ್ರ ಉಪಾಧ್ಯ | ಯಂ. ಸತ್ಯನಾರಾಯಣ ಭಟ್ | ಗುರುರಾಜ ಪೇಜಾವರ |
|---|---|---|
| ಅಧ್ಯಕ್ಷರು, ಆನಂದ ಬಳಗ | ಕಾರ್ಯದರ್ಶಿ, ಆನಂದ ಬಳಗ | ಸಂಚಾಲಕರು, ಯುವ ವಿಭಾಗ |
| | ಮೊ : 99458 02607 | ಮೊ : 98440 09293 |

### ಕಾರ್ಯಕ್ರಮ



| | | | |
|---|---|---|---|
| ಪೂರ್ವಾಹ್ನ | 8-30 | ಘಂಟೆಗೆ | ಸ್ಪರ್ಧಾಳುಗಳ ನೊಂದಣಿ |
| | 9-00 | ಘಂಟೆಗೆ | ಉದ್ಘಾಟನೆ |
| | 9-15 | ಘಂಟೆಗೆ | ಆಟೋಟ ಸ್ಪರ್ಧೆಗಳು / ಕ್ರಿಕೆಟ್ ವಿಶೇಷವಾಗಿ ಮಹಿಳೆಯರು ಹಾಗೂ 45 ವರ್ಷ ಮೇಲ್ಪಟ್ಟ ಪುರುಷರ ಜಂಟಿ ಕ್ರಿಕೆಟ್ |
| | 12.00 | ಘಂಟೆಗೆ | ಕ್ರಿಕೆಟ್ ಎಲ್ಲರಿಗೂ (ಪುರುಷರಿಗೆ) |
| ಅಪರಾಹ್ನ | 1-00 | ಘಂಟೆಗೆ | ಭೋಜನ |
| | 2-00 | ಘಂಟೆಗೆ | ಕ್ರಿಕೆಟ್ / ಆಟೋಟ ಸ್ಪರ್ಧೆಗಳು |
| ಸಂಜೆ | 4-00 | ಘಂಟೆಗೆ | ಚಹಾ ವಿರಾಮ |
| | 4-30 | ಘಂಟೆಗೆ | ಮನೋರಂಜನಾ ಆಟೋಟಗಳು |



### ಕ್ರೀಡಾ ಸ್ಪರ್ಧೆಗಳು

| ಪುರುಷರಿಗೆ | ಮಹಿಳೆಯರಿಗೆ | ಮಕ್ಕಳಿಗೆ |
|---|---|---|
| 1) ಕ್ರಿಕೆಟ್ (12 ವರ್ಷ ಮೇಲ್ಪಟ್ಟವರಿಗೆ) | 1) ತ್ರೋಬಾಲ್ | 1) 100 ಮೀ. ಓಟ (10-16 ವರ್ಷ) |
| 2) ವಾಲಿಬಾಲ್ | 2) 100 ಮೀ. ಓಟ | 2) 50 ಮೀ ಓಟ (5-10 ವರ್ಷ) |
| 3) 100 ಮೀ. ಓಟ | 3) ತ್ರೋಬಾಲ್ ಎಸೆತ | 3) ವಿಕೆಟ್‌ಗೆ ಚೆಂಡು ಎಸೆತ (5-10 ವರ್ಷ) |
| 4) ಶಾಟ್‌ಪುಟ್ ಎಸೆತ | 4) ನಡಿಗೆಯ ಓಟ (40 ವರ್ಷ ಮೇಲ್ಪಟ್ಟವರಿಗೆ) | 4) ವಾಲಿಬಾಲ್ ಎಸೆತ (10-16 ವರ್ಷ) |
| 5) ನಡಿಗೆಯ ಓಟ (50 ವರ್ಷ ಮೇಲ್ಪಟ್ಟವರಿಗೆ) | 5) ಕ್ರಿಕೆಟ್ | 5) ಲೇಮನ್ ಅಂಡ್ ಸ್ಪೂನ್ |
| 6) ಹಗ್ಗ ಜಗ್ಗಾಟ | 6) ಲೆಮನ್ ಅಂಡ್ ಸ್ಪೂನ್ | 6) ಪುಸ್ತಕದ ಓಟ |
| | 7) ಹಗ್ಗ ಜಗ್ಗಾಟ | |

**ವಿಶೇಷ ಸೂಚನೆ :**

1) ಮೇಲೆ ತಿಳಿಸಿದ ಸ್ಪರ್ಧೆಗಳಲ್ಲದೆ ಸಂದರ್ಭಾನುಸಾರವಾಗಿ ಕೆಲವೊಂದು ಹೆಚ್ಚಿನ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು
2) ಕ್ರಿಕೆಟ್ ಆಟ ಆಡಲು ಬಯಸುವ ಮಹಿಳೆಯರು ತಮಗೆ ಅನುಕೂಲಕರವಾದ ಉಡುಗೆಯಲ್ಲಿ ಬರುವುದು ಉತ್ತಮ.
3) ಬೆಳಗ್ಗೆ 9 ಘಂಟೆಗೆ ಕ್ರಿಕೆಟ್ ಪಂದ್ಯ ಪ್ರಾರಂಭವಾಗಲಿದೆ.
4) ಹೆಚ್ಚಿನ ವಿವರಗಳಿಗೆ **ಎಂ.ಕೆ ಗುರುಮೂರ್ತಿ 9844022692** **ಸಂದೀಪ್ ರಾವ್ 98450 98150**

# ಮಹಿಳಾ ವಿಭಾಗದಿಂದ ಅಯೋಧ್ಯಾ ಪ್ರವಾಸ

ಆತ್ಮೀಯ ಬಳಗದ ಸದಸ್ಯರಿಗೆ ನಮ್ಮ ಅಯೋಧ್ಯಾ ಪ್ರಯಾಣ ಮತ್ತು ಕಾಶಿಯ ಪ್ರವಾಸದ ಬಗ್ಗೆ ಚಿಕ್ಕ ವಿವರ ಕೊಡಲು ಬಹಳ ಸಂತೋಷವಾಗುತ್ತಿದೆ.

## ದಿನ : 1

**ನವೆಂಬರ್ 3 :** ಭಾನುವಾರದಂದು ನಾವು 30 ಜನ ಬಳಗದ ಸದಸ್ಯರು ಬೆಳಗ್ಗೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸೇರಿದೆವು. ನಮ್ಮ ವಿಮಾನದ ವೇಳೆ ಬೆಳಗ್ಗೆ 11.30 ಆಗಿತ್ತು. ಸರಿಯಾದ ವೇಳೆಗೆ ವಿಮಾನದಲ್ಲಿ ಕುಳಿತು ನಾವೆಲ್ಲರೂ ಸುಮಾರು 2 ಗಂಟೆಗೆ ಅಯೋಧ್ಯಾ ತಲುಪಿದೆವು.

ರಾಮಜನ್ಮಭೂಮಿಯಲ್ಲಿ ಕಾಲಿಟ್ಟ ಕ್ಷಣವೇ ಜನ್ಮ ಸಾರ್ಥಕವಾಯಿತೆಂಬ ಮನೋಭಾವ. ನಮಗೋಸ್ಕರ ಒಂದು A/C ಬಸ್ ನಮ್ಮನ್ನೆಲ್ಲಾ ಹೋಟೆಲ್‌ಗೆ ಕರೆದೊಯ್ಯಲು ತಯಾರಾಗಿತ್ತು. ನಾವೆಲ್ಲರೂ ಹೋಟೆಲ್‌ಗೆ ತಲುಪಿ ರೂಮ್ ಸೇರಿ ಶುಚಿಯಾಗುವ ವೇಳೆಗೆ ನಮಗಿಂತಲೂ ಮುಂಚೆ ಬಂದಿಳಿದ ಬಾಣಸಿಗರು ರುಚಿಯಾದ ಅಡಿಗೆ ತಯಾರಿಸಿದ್ದರು. ಊಟ ಮಾಡಿ ನಾವೆಲ್ಲರೂ ಹೊರಟಿದ್ದು ಸರಯೂ ನದಿ ನೋಡಲು. ಮಾರ್ಗ ಮಧ್ಯದಲ್ಲಿ ಲತಾಮಂಗೇಶ್ಕರ್ ನೆನಪಾರ್ಥ ವೀಣೆಯ ಆಕೃತಿ ಮಾಡಿದ ವೃತ್ತವನ್ನು ನೋಡಿ ಮುಂದೆ ಅಯೋಧ್ಯಾ ರಾಮನ ದರ್ಶನಕ್ಕೆ ಹೋದೆವು.

**ಜೈ ಶ್ರೀರಾಮ್ ಜೈ ಶ್ರೀರಾಮ್** ಘೋಷಣೆಯೊಂದಿಗೆ ರಾಮನ ದರ್ಶನಕ್ಕೆ ನಾವೆಲ್ಲರೂ ಸರದಿಯಲ್ಲಿ ಒಂದೊಂದೇ ಮೆಟ್ಟಿಲೇರಿ ರಾಮನ ದರ್ಶನ ಮಾಡಿದಾಗ ಜೀವನ ಸಾರ್ಥಕವೆನಿಸಿದ್ದು ಖಂಡಿತ. ನಂತರ ಹನುಮಾನ್ ಗದ್ದಿಯನ್ನು ನೋಡಿಬಂದೆವು. ನಂತರ ಪುನಃ ಹೋಟೇಲಿನಲ್ಲಿ ವಿಶ್ರಾಂತಿ.



ಶ್ರೀಮತಿ ಶೋಭಾ ರಾಧಾಕೃಷ್ಣ

## ದಿನ : 2

**ನವೆಂಬರ್ 4 :** ಬೆಳಗ್ಗೆ 5.45ರ ಹೊತ್ತಿಗೆ ತಯಾರಾಗಿ ಹೊರಟಿದ್ದು ಪ್ರಯಾಗ್ ರಾಜ್ ಕಡೆಗೆ, ಹಿಂದೆ **ಇಲಹಾಬಾದ್** ಆಗಿದ್ದು **ಪ್ರಯಾಗ್ ರಾಜ್** ಎಂದು ಪ್ರಖ್ಯಾತಿ ಆಗಿದೆ. ದಾರಿಯಲ್ಲಿ ಬೆಳಗಿನ ಉಪಾಹಾರ ಸೇವಿಸಿ ಮಧ್ಯಾಹ್ನದ ಹೊತ್ತಿಗೆ ಪ್ರಯಾಗ್ ರಾಜ್‌ನ ಕಾಶಿಮಠ ತಲುಪಿದೆವು. ನಮ್ಮ ಜೊತೆ ಬಂದಿದ್ದ 8 ಜನ ದಂಪತಿಗಳು ವೇಣಿದಾನ ಹಾಗೂ ಶ್ರಾದ್ಧ ಪಿಂಡಪ್ರದಾನ ಕಾರ್ಯಕ್ರಮ ನೆರವೇರಿಸಿದರು. ನಂತರ ಎಲ್ಲರೂ ಪಿಂಡ ವಿಸರ್ಜನೆಗಾಗಿ ತ್ರಿವೇಣಿ ಸಂಗಮಕ್ಕೆ ದೋಣಿಯಲ್ಲಿ ಹೋಗಿ ಗಂಗಾ, ಯಮುನಾ ಹಾಗೂ ಸರಸ್ವತಿ ನದಿ ಸೇರುವ ಜಾಗದಲ್ಲಿ ಮುಳುಗು ಹಾಕಿದೆವು. ತ್ರಿವೇಣಿ ಸಂಗಮದಲ್ಲಿ ಮುಳುಗು ಹಾಕುವುದರಿಂದ ಪಾಪ ವಿಮೋಚನೆ ಆಗುತ್ತದೆ ಎಂಬ ನಂಬಿಕೆ ಇದೆ. ಸಾಯಂಕಾಲ ನಾವೆಲ್ಲರೂ ಅಲೋಪಿ ಮಾತೆಯ ದೇವಸ್ಥಾನಕ್ಕೆ ಭೇಟಿ ನೀಡಿದೆವು. ನವರಾತ್ರಿಯ ನವ ಮಾತೆಯರಲ್ಲಿ ಸ್ಕಂದ ಮಾತೆಯ ದೇವ



ಮಂದಿರವೂ ಅದೇ ಆಗಿದೆ. ಒಮ್ಮೆ ಆ ದೇವಿಯ ದರ್ಶನ ಮಾಡಿದರೆ ಲಲಿತಾ ಪಾರಾಯಣದ ಸಂಪೂರ್ಣ ಫಲ ಪ್ರಾಪ್ತಿ ಎಂದು ಅರ್ಚಕರು ತಿಳಿಸಿದರು.

ಪ್ರಯಾಗ್‌ರಾಜ್‌ನಲ್ಲಿ ರಾತ್ರಿ ಹೋಟೆಲ್‌ನಲ್ಲಿ ಗುರುರಾಜ್ ರಾವ್ ಹಾಗೂ ಶ್ಯಾಮಲ ಗುರುರಾಜ್ ಅವರ 48ನೇ ವಿವಾಹ ವಾರ್ಷಿಕೋತ್ಸವವನ್ನು cake cut ಮಾಡುವುದರ ಮೂಲಕ ನೆರವೇರಿಸಿದೆವು. ದಂಪತಿಗಳಿಗೆ ಎಲ್ಲಾ ಸ್ನೇಹಿತರು ಶುಭ ಹಾರೈಸಿದರು.

## ದಿನ : 3

**ನವೆಂಬರ್ 5:** ಈ ದಿನ ನಮ್ಮ ಪ್ರಯಾಣ ಪ್ರಯಾಗ್ ರಾಜ್‌ನಿಂದ ವಾರಣಾಸಿಯ ಕಡೆಗೆ ಸುಮಾರು 6 ಗಂಟೆಗಳ ಪ್ರಯಾಣ. ದಾರಿಯಲ್ಲಿ ಸೀತಾಮಂದಿರ ಎಂಬ ಸ್ಥಳವನ್ನು ವೀಕ್ಷಿಸಿದೆವು. ತಾಯಿ ಸೀತಾಮಾತೆ ರಾಮನ ಅಗ್ನಿ ಪರೀಕ್ಷೆಯ ನಂತರ ಭೂತಾಯಿಯನ್ನು ಸೇರಿದ ಜಾಗ ಎಂಬ ಪ್ರತೀತಿ ಇದೆ. ಇಲ್ಲಿ ದೊಡ್ಡ ಹನುಮಂತನ ವಿಗ್ರಹವುಳ್ಳ ದೇವಾಲಯವೂ ಇದೆ.

ವಾರಣಾಸಿ ತಲುಪಿದಾಗ ಮಧ್ಯಾಹ್ನ ಕಳೆದಿತ್ತು. ಮಧ್ಯಾಹ್ನದ ಊಟದ ನಂತರ ದೋಣಿಯಲ್ಲಿ ಗಂಗಾನದಿ ಯಲ್ಲಿ ವಿಹರಿಸುತ್ತಾ ಗಂಗಾರತಿ ನೋಡಲು ತಯಾರಾದೆವು. ದೋಣಿ ಸಾಗುವ ದಾರಿಯಲ್ಲಿ ಸುಮಾರು 20–25 ಘಾಟ್‌ಗಳ ದರ್ಶನವಾಯಿತು. ಎಲ್ಲರ ಮನ ಸೆಳೆದದ್ದು ನಮೋ ಘಾಟ್. ಆ ಘಾಟ್‌ಗೆ ನಾವೆಲ್ಲರೂ ವಂದಿಸಿ ಗಂಗಾರತಿ ನಡೆಯುವ ಜಾಗಕ್ಕೆ ಬಂದೆವು. ಜೀವಮಾನದಲ್ಲಿ ನೋಡಬೇಕಾದ ದೃಶ್ಯ. ಮೊದಲಿಗೆ ಹನುಮಾನ ಚಾಲಿಸದಿಂದ ಪ್ರಾರಂಭವಾದ ಆರತಿ ಹಲವು ಭಜನೆಗಳೊಂದಿಗೆ ಧೂಪ ದೀಪದ ಆರತಿ ಬೆಳಗುವುದನ್ನು ನೋಡಲು ಎರಡು ಕಣ್ಣು ಸಾಲದು. ತಾಳಬದ್ಧವಾಗಿ ಗಂಟೆ ಮೊಳಗಿಸುತ್ತ 4 ಜನ ಪಂಡಿತರು ಆರತಿ ಮಾಡುವುದು ಒಂದು ಅದ್ಭುತ ಕಲೆ ಎಂದರೂ ತಪ್ಪಾಗಲಾರದು. ಪ್ರವಾಸಿಗರು ಹಾಗೂ ಸ್ಥಳೀಯರ ಅತ್ಯಂತ ಆಕರ್ಷಣೀಯ ಹಾಗೂ ದೈವಿಕ ಕಾರ್ಯಕ್ರಮ ಎಂಬುದು ನನ್ನ ಭಾವನೆ.

## ದಿನ : 4

**ನವೆಂಬರ್ 6 :** ಈ ದಿನ ವಾರಣಾಸಿಯಲ್ಲಿ ಬೆಳಗ್ಗೆ ಸುಮಾರು 4.45ಕ್ಕೆ ಕಾಲ ಭೈರವ ದೇವಸ್ಥಾನಕ್ಕೆ ಬಂದು ಕಾಲ ಭೈರವನ ದರ್ಶನ ಮಾಡಿ ಪೂಜಿಸಿದ ಕಾಶಿದಾರಗಳನ್ನು ಖರೀದಿಸಿದೆವು. ನಂತರ ಬಿಂದು ಮಾಧವನ ದರ್ಶನ ಮಾಡಿ ಗಂಗಾಸ್ನಾನಕ್ಕೆ ತಯಾರಾದೆವು. ಎಲ್ಲರಿಗೂ ಸಂಕಲ್ಪ ಮಾಡಿಸಿದ ಪಂಡಿತರು ಗಂಗೆಯಲ್ಲಿ ಮುಳುಗು ಹಾಕಲು ಹೇಳಿದರು. ಗಂಗಾಸ್ನಾನದ ನಂತರ 8 ದಂಪತಿಗಳು ಪಿಂಡ ಪ್ರದಾನವನ್ನು ತಟದಲ್ಲಿರುವ ಗೋಕರ್ಣನಾಥೇಶ್ವರ ದೇವಸ್ಥಾನದಲ್ಲಿ ನಡೆಸಿದರು. ಪ್ಲಾಸ್ಟಿಕ್ ಮುಕ್ತ ಪ್ರದೇಶ ಎಂದು ಸಾರಿದ ಮೋದಿಯವರ ಹಂಬಲದಂತೆ ಗಂಗೆಯ ತಟದಲ್ಲಿ ಎಲ್ಲೂ ಪ್ಲಾಸ್ಟಿಕ್ ಬಳಸದಂತೆ ಎಚ್ಚರ ವಹಿಸುತ್ತಿದ್ದರು. ನಂತರ ದೊಡ್ಡ ದೋಣಿಯಲ್ಲಿ ಹೊರಟು ಕಾಶಿ ಕಾರಿಡಾರ್‌ಗೆ ಬಂದೆವು. ದಾರಿಯಲ್ಲಿ ಮಣಿ ಕರ್ಣಿಕಾ ಘಾಟ್‌ನ ದರ್ಶನವೂ ಆಯಿತು. ಕಾಶಿ ವಿಶ್ವನಾಥನು ಗಂಗೆಯನ್ನು ಕಾಣಲು ಸಾಧ್ಯವಾಗುವಂತಹ ದಾರಿ ಅದು.

ಮೊದಲಿಗೆ ಅಲ್ಲಿ ಕಾಣುವುದು ಅಹಲ್ಯಾಬಾಯಿ ಹೋಲ್ಕರ್ ಅವರ ಪ್ರತಿಮೆ. ದೇವಸ್ಥಾನ ಹಾಗೂ ಅವುಗಳ ಜೀರ್ಣೋದ್ಧಾರದ ಬಗ್ಗೆ ಶ್ರಮಿಸಿದ ಅಹಲ್ಯಾಬಾಯಿ ಹೋಲ್ಕರ್ ಅವರಿಗೆ ತಲೆಬಾಗಿ ನಮಸ್ಕರಿಸಿದೆವು. ನಂತರ ಕಾಶಿ ವಿಶ್ವನಾಥನ ದರ್ಶನ ಅದ್ಭುತ, ಅದಮ್ಯ ರುದ್ರಾಭಿಷೇಕದ ಸೇವೆ ನಡೆಸಿ ಕಾಶಿ ವಿಶ್ವನಾಥನ ದರ್ಶನ ಪಡೆದು, ಅನ್ನಪೂರ್ಣೆಯ ದರ್ಶನವೂ ಆಯಿತು. ಜ್ಞಾನವ್ಯಾಪಿ ಬಾವಿಯ ಪುಣ್ಯ ಪಾವನ ದರ್ಶನವಾಯಿತು. ನಂದಿಯ ದರ್ಶನವೂ ಆಯಿತು.

ಇದೇ ದಿನ ಸಾಯಂಕಾಲ ಸಂಕಟ ಮೋಚನ ಹನುಮಂತ ದಿವ್ಯ ರೂಪದ ದರ್ಶನ ಮಾಡಿದೆವು. ಜೊತೆಯಲ್ಲಿ ತುಳಸಿ ಮಾನಸ ದೇವಸ್ಥಾನ ಹಾಗೂ ಕವಡೆ ಅಮ್ಮನವರ ದೇವಸ್ಥಾನಗಳ ದರ್ಶನವೂ ಆಯಿತು.

## ದಿನ : 5

**ನವೆಂಬರ್ 7 :** ಈ ದಿನ ನಮ್ಮ ಪ್ರಯಾಣ ವಾರಣಾಸಿ ಯಿಂದ ಬೋಧಗಯಾಕ್ಕೆ. ದಾರಿಯಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ವೀಕ್ಷಣೆ ಮಾಡಿದೆವು. ಸಂಸ್ಥಾಪಕರಾದ ಮದನ್ ಮೋಹನ್ ಮಾಲವಿಯ ಅವರ ಆದರ್ಶ ನಮ್ಮೆಲ್ಲರ ಮನಸ್ಸಿನ ಮೂಲೆಯಲ್ಲಿ ಬಂದು ಇನ್ನೂ ಹೆಚ್ಚು ಇವರ ಬಗ್ಗೆ ತಿಳಿದುಕೊಳ್ಳಬೇಕೆಂಬ ಆಸಕ್ತಿ ಉಂಟಾಯಿತು.

ಬನಾರಸ್ ಹಿಂದೂ ವಿಶ್ವವಿದ್ಯಾಲಯವು ತನ್ನ ಸೌಂದರ್ಯ ಹಾಗೂ ಶೈಕ್ಷಣಿಕ ಗುಣಮಟ್ಟಕ್ಕೆ ವಿಶ್ವವಿಖ್ಯಾತ ವಾಗಿದೆ. ನಂತರ ಬೋಧಗಯಾದಲ್ಲಿ ಹೋಟೆಲ್‌ಗೆ ತಲುಪಿದೆವು. ಸಾಯಂಕಾಲ ವಿವಿಧ ಬುದ್ಧನ ದೇವಸ್ಥಾನ ಗಳಿಗೆ ಭೇಟಿಕೊಟ್ಟೆವು. (ಉದಾಹರಣೆಗೆ ಟಿಬೇಟಿಯನ್ ಬುದ್ಧ ದೇವಸ್ಥಾನ Daiakyo ದೇವಸ್ಥಾನ ಹಾಗೂ ಮಹಾಬೋಧಿ ದೇವಸ್ಥಾನ).

ಮಹಾಬೋಧಿ ದೇವಸ್ಥಾನದಲ್ಲಿ ಬುದ್ಧನಿಗೆ ಜ್ಞಾನೋದಯವಾದ ಸ್ಥಳ, ಅವನ ಪಾದುಕೆಯ ದರ್ಶನ ಪಡೆದೆವು. ಐದು ಕಡೆಗಳಲ್ಲಿ ಅವನು ಪ್ರಯಾಣಿಸಿದ

ವಿವರವನ್ನು ಉತ್ತಮವಾಗಿ ಅಲ್ಲಿ ಗೈಡ್ ವಿವರಿಸಿದರು. ಪ್ರಪಂಚದ ನಾನಾ ಕಡೆಗಳಿಂದ ಭಕ್ತರ ತಂಡ ಅಲ್ಲಿ ಬಂದು ವಿಶೇಷ ಪೂಜೆ ಸಲ್ಲಿಸುತ್ತಿದ್ದರು.

## ದಿನ : 6

**ನವೆಂಬರ್ 8 :** ಬೋಧಗಯಾದಿಂದ ಬೆಳಗಿನ ಜಾವ ಸುಮಾರು 5 ಗಂಟೆಗೆ ಹೊರಟು ನಾವು ವಿಷ್ಣು ಪಾದ ಇರುವ ಜಾಗಕ್ಕೆ ಬಂದೆವು. ಹಿಂದುಗಳಿಗೆ ವಿಷ್ಣುಪಾದದ ಸ್ಪರ್ಶ ಹಾಗೂ ದರ್ಶನ ಮುಕ್ತಿಯ ಒಂದು ಭಾಗವಾಗಿದೆ. ಧನ್ಯತೆಯ ಭಾವದಿಂದ ತಾಮ್ರದಿಂದ ಮಾಡಿದ ವಿಷ್ಣು ಪಾದಗಳನ್ನು ತಲೆಬಾಗಿ ನಮಸ್ಕರಿಸಿ ಖರೀದಿಸಿದೆವು. ನಮ್ಮಲ್ಲಿ ಶ್ರಾದ್ಧ ಕರ್ಮಗಳಲ್ಲಿ ಇದನ್ನು ಉಪಯೋಗಿಸುವ ಪದ್ಧತಿ ಇರುವುದು ಎಲ್ಲರಿಗೂ ತಿಳಿದಿದೆ.

ಇಲ್ಲಿಯೂ ಕೂಡ ನಮ್ಮ ಜೊತೆಗೆ ಬಂದ ದಂಪತಿಗಳು, ಪಿತೃಗಳಿಗೆ ಪಿಂಡ ಪ್ರದಾನ ಕಾರ್ಯಕ್ರಮ ನೆರವೇರಿಸಿದರು. ನಾವು ಹೋದ ದಿನದಂದು ಗಯಾದಲ್ಲಿ ಒಂದು ವಿಶೇಷ ಪೂಜೆ ಅಥವಾ ಹಬ್ಬ ಆಚರಣೆಯ ದಿನವಿತ್ತು. ಅದೇ 'ಛತ್ ಪೂಜಾ' ಎಂದು. ಮುಳುಗುವ ಸೂರ್ಯ ಹಾಗೂ ಉದಯಿಸುವ ಸೂರ್ಯನ ಪೂಜೆ ಮಾಡುವುದು ಈ ಹಬ್ಬದ ವಿಶೇಷತೆ. ನಾವು ಬೆಳಗ್ಗಿನ ಜಾವ ದಾರಿಯುದ್ದಕ್ಕೂ ಬರಿಕಾಲಿನಲ್ಲಿ ನಡೆದುಕೊಂಡು ಕಬ್ಬು ಇತರ ಸಾಮಾನುಗಳನ್ನು ತಲೆಯಲ್ಲಿ ಹೊತ್ತು ಹೋಗುತ್ತಿರುವ ಜನರ ದೃಶ್ಯ ಕಂಡು ಪಾವನರಾದೆವು. ಅವರ ನಂಬಿಕೆಗೆ ಬಹಳ ಹೆಮ್ಮೆ ಎನಿಸಿತು.

ಮಧ್ಯಾಹ್ನದ ಊಟದ ನಂತರ ಪುನಃ ವಾರಣಾಸಿಗೆ ವಾಪಾಸು ಹೊರಟೆವು. ವಾರಣಾಸಿಗೆ ಹೋದ ಮೇಲೆ ಬನಾರಸ್‌ಸೀರೆ ತೆಗೆದುಕೊಳ್ಳದಿದ್ದರೆ ಹೇಗೆ? ಈ ದಿನ ಸಾಯಂಕಾಲ ಸ್ವಲ್ಪಮಟ್ಟಿನ ಖರೀದಿ ಆಯಿತು.

## ದಿನ : 7

**ನವೆಂಬರ್ 9 :** ಬೆಳಗ್ಗೆ ಬೇಗ ಉಪಹಾರ ಸೇವಿಸಿ ಎಲ್ಲರೂ ತೆರಳಿದ್ದು ಸೀರೆ ಅಂಗಡಿಗೆ. ಸುಮಾರು ಮಟ್ಟಿನ ಖರೀದಿ ಆದ ನಂತರ ಮಧ್ಯಾಹ್ನದ ಊಟದ ಹೊತ್ತಿಗೆ ಹೋಟೆಲ್‌ಗೆ ತೆರಳಿದೆವು. ನಂತರ ನಾವು ಸಾರಾನಾಥ ಸ್ತೂಪ ನೋಡಲು ಹೋದೆವು. ಬೃಹದಾಕಾರವಾದ ವಾರಣಾಸಿಯ ಸ್ತೂಪವನ್ನು ನಿರ್ಮಿಸಿದವರು ಅಶೋಕ ಚಕ್ರವರ್ತಿ. ಈ ಜಾಗದಲ್ಲಿ ಬುದ್ಧ ತನ್ನ ಮೊದಲನೆಯ ಧರ್ಮೋಪದೇಶ ಮಾಡಿರುವುದು ನಾವು ಗಮನಿಸಬೇಕಾದ ಅಂಶ.

ಕಮಲಗಳುಳ್ಳ ಸಣ್ಣ ಕೊಳಗಳು, ಹೂಗಳ ಗಿಡಗಳ ನಡುವೆ ನಿರ್ಮಿಸಿರುವ ಬುದ್ಧನ ಗೃಹವನ್ನು ನೋಡುವುದೇ ಒಂದು ಆನಂದ. ಅಲ್ಲಿಂದ ನೇರವಾಗಿ ನಾವೆಲ್ಲರೂ ವಾರಾಣಾಸಿಯ ವಿಮಾನ ನಿಲ್ದಾಣಕ್ಕೆ ಬಂದು ತಲುಪಿದೆವು. ಸಾಯಂಕಾಲ 6.15ರ ವಿಮಾನದಲ್ಲಿ ಕುಳಿತು 8.50ರ ಹೊತ್ತಿಗೆ ಬೆಂಗಳೂರು ತಲುಪಿದೆವು. 7 ದಿನಗಳ ಈ ಪ್ರವಾಸ ಆಧ್ಯಾತ್ಮಿಕವಾಗಿಯೂ ಹಾಗೂ ಮನೋರಂಜನೆಯಿಂದಲೂ ಕೂಡಿ ಪ್ರಯಾಣಿಸಿದ ಎಲ್ಲರ ಮನಸ್ಸಿಗೂ ಬಹಳ ಸಂತೋಷ ತಂದುಕೊಟ್ಟಿತು.

ಈ ಪ್ರವಾಸದ ಪ್ರಧಾನ ರೂವಾರಿ ನಮ್ಮೊಡನೆ ಬಂದಿದ್ದ Travel for Youನ ಪ್ರದೀಪ್ ಆಚಾರ್. ಪ್ರತಿದಿನದ ಕಾರ್ಯಕ್ರಮವನ್ನು ಎಷ್ಟು ಅಚ್ಚುಕಟ್ಟಾಗಿ ಯೋಜಿಸಿ ಎಲ್ಲಿಯೂ ಒಂದು ಚೂರೂ ತಪ್ಪು ಆಗದ ಹಾಗೆ ನೋಡಿಕೊಂಡರು. ಅವರು ಹೇಳಿದ ಸನಾತನ ಧರ್ಮದ ವಿವರಣೆಯಿಂದ ನಮ್ಮೆಲ್ಲರಿಗೂ ರೋಮಾಂಚನ ವಾಗಿರುವುದು ಖಂಡಿತ ಹಿಂದೂ ಧರ್ಮದ ಬಗ್ಗೆ ಅವರಿಗೆ ಇದ್ದ ಅಭಿಮಾನ ಕಂಡು ಖಂಡಿತ ಬಹಳ ಹೆಮ್ಮೆ ಆಯಿತು.

ಅಯೋಧ್ಯೆಯಿಂದ ಪ್ರಯಾಗ್‌ರಾಜ್, ವಾರಣಾಸಿಯಿಂದ ಬೋದಗಯಾದವರೆಗಿನ ಸುಮಾರು 6 ಗಂಟೆಗಳ ಪ್ರಯಾಣದಲ್ಲಿ Mediation ಮತ್ತು Will ಬಗ್ಗೆ ರಂಜಿಸಿ ಅದ್ಭುತವಾದ ವಿಶೇಷ ಮಾಹಿತಿಯನ್ನು ಪ್ರಶಾಂತ ಚಂದ್ರ ಅವರು ನೀಡಿದರು. ಅಲ್ಲದೆ ತಮ್ಮ ಹಾಸ್ಯಭರಿತ ಮಾತಿನಿಂದ ಪ್ರಯಾಣದ ದಾರಿ ಸವೆದದ್ದು ತಿಳಿಯಲಿಲ್ಲ. ಕುಸುಮಾ ಆಂಟಿ Housie Husie ಆಡಿಸಿದರೆ ಬಂದಿದ್ದ ಪ್ರತಿಯೊಬ್ಬರು ಎಲ್ಲಾ ಕ್ರೀಡೆಗಳಲ್ಲಿ, ಹಾಡು ಹಾಡುವುದರಲ್ಲಿ ಭಾಗವಹಿಸಿದರು. ಹಿರಿಯರು, ಕಿರಿಯರೂ ಎಲ್ಲರೂ ಸಂಪೂರ್ಣ ಸಂತಸ ಪಟ್ಟರು ಎಂದು ಹೇಳಲಿಕ್ಕೆ ನನಗೆ ಬಹಳ ಖುಷಿಯಾಗುತ್ತದೆ. ಮಹಿಳಾ ವಿಭಾಗದ ವತಿಯಿಂದ ಪ್ರತಿವರ್ಷವೂ ನಡೆಸುವ ಪ್ರವಾಸದಂತೆ ಈ ವರ್ಷದ ಅಯೋಧ್ಯಾ ಕಾಶಿ ಪ್ರವಾಸವೂ ಸುಖಕರವಾಗಿತ್ತು. ಸಂತೃಪ್ತಿಯಿಂದ ಕೂಡಿತ್ತು. ಎಲ್ಲಾ ವ್ಯವಸ್ಥೆ, ಮಾಡಿದ ಮಹಾಬಲೇಶ್ವರ, ಮೀನ ಮಹಾಬಲೇಶ್ವರ, ಅವರಿಗೆ ಸಹಾಯ ಮಾಡಿದ ನೈನಿ ಭಟ್, ಲತಾ ಪ್ರಶಾಂತ್ ಅವರಿಗೆಲ್ಲಾ ಎಲ್ಲರ ಪರವಾಗಿ ನಾನು ಧನ್ಯವಾದ ಸಮರ್ಪಿಸುತ್ತಿದ್ದೇನೆ. ಬಹಳ ಅಚ್ಚುಕಟ್ಟಾಗಿ, ರುಚಿ ರುಚಿಯಾಗಿ ಅಡುಗೆ ಮಾಡಿ ಕಾಲಕಾಲಕ್ಕೆ ನಮಗೆ ಉಣಬಡಿಸಿದ ಉಮೇಶ್ ಭಟ್ಟ, ದರ್ಶನ್ ಹಾಗೂ ಅವರ ತಂಡಕ್ಕೆ ನಮ್ಮ ನಮನಗಳು.

ಯಾವುದೇ ಕಾರ್ಯಕ್ರಮ ಯಶಸ್ವಿ ಆಗುವುದು ಭಾಗವಹಿಸಿದ ಎಲ್ಲರ ಸಹಕಾರದಿಂದ (ಕೆಲವರು ಮೊದಲ ಬಾರಿ ಪ್ರಯಾಣಿಸುತ್ತಿದ್ದರು. ಮತ್ತೆ ಕೆಲವರು ಸುಮಾರು ವರ್ಷದಿಂದ ಈ ರೀತಿಯ ಪ್ರವಾಸದ ರುಚಿ ಕಂಡವರು) ಎಲ್ಲರ ಸಹಕಾರದಿಂದ ಸಂಪನ್ನಗೊಂಡ ಈ ಪ್ರವಾಸ ಮತ್ತೆ ಮುಂಬರುವ ಪ್ರವಾಸದಲ್ಲಿ ಭಾಗವಹಿಸುವ ಹುಮ್ಮಸ್ಸು ಉತ್ಸಾಹ ಎಲ್ಲರ ಮುಖದಲ್ಲೂ ಮಿನುಗುತ್ತಿತ್ತು.

*With Best Compliments from :*

## Hotel Sheetal

#32/12, Sheshadri Road
Ananda Rao Circle
Bangalore - 560 009
Ph : 41139560 - 64 | Mobile : 98457 77381






- Food and Drink : Restaurant, Room Service
- Services : Front Door 24x7, Baggage Storage, Lift Full-service laundry, House keeping
- Non AC Rooms, Private Bathroom

## Sheetal Residency

#3/1, Old Sawar Lane, Sheshadri Road
Near Sangolli Rayanna Circle
Bangalore - 560 009
Ph : 080 2234 3777 / 80 / 81





- Free Breakfast
- Near Public Transport
- Great Rooms (A/C)
- Great Service
- Free Wi-Fi
- Parking Area

info@sheetalresidency.com  www.sheetalresidency.com

ಎ. ಪ್ರಭಾಕರ ರಾವ್, ಮ್ಯಾನೇಜಿಂಗ್ ಪಾರ್ಟ್‌ನರ್

ಶುಭಾಶಯಗಳನ್ನು ಕೋರುವವರು,

॥ ಹರಿಃ ಓಂ ॥

## ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.

ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ

(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

### ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಶ್ರೀರಾಂಪುರ : 389, ಮಹಾಕವಿ ಕುವೆಂಪು ರಸ್ತೆ
ನಾಗಪ್ಪ ಬ್ಲಾಕ್, ಬೆಂಗಳೂರು – 21

### ಉಪಾಧ್ಯ ಆಯುರ್ವೇದ ಹೆಲ್ತ್‌ಕೇರ್

ಪೂರ್ಣಿಮ ರಿಜೆನ್ಸಿ ಹತ್ತಿರ, ಸಿದ್ಧಯ್ಯ ರಸ್ತೆ, ಬೆಂಗಳೂರು–27

# ಒಂದು ದಿನದ ಪ್ರವಾಸ

ಆನಂದ ಬಳಗದ ಸಾಂಸ್ಕೃತಿಕ ವಿಭಾಗವು ಸಂಚಾಲಕರಾದ ಶ್ರೀ ನಾಗರಾಜ ಉಪಾಧ್ಯಾಯರ ನೇತೃತ್ವದಲ್ಲಿ 22.12.2024 ರಂದು ಒಂದು ದಿನದ ಪ್ರವಾಸವನ್ನು ಆಯೋಜಿಸಿತ್ತು.

ಬೆಳಿಗ್ಗೆ 6.40ಕ್ಕೆ ವುಡ್‌ಲ್ಯಾಂಡ್ಸ್ ಹೋಟೆಲಿನ ಮಾಲೀಕರ ಸೌಜನ್ಯದಿಂದ ಒದಗಿಸಲಾದ ಕಾಫಿ ಕುಡಿದು ಪ್ರವಾಸದ ಸದಸ್ಯರೆಲ್ಲರೂ ಒಟ್ಟು ಸೇರಿದರು. ಪೂಜೆಯ ಬಳಿಕ ತೆಂಗಿನಕಾಯಿ ಒಡೆದು ಶಂಖನಾದದೊಂದಿಗೆ ಬಸ್ಸಿಗೆ ಚಾಲನೆ ನೀಡಿ ಅಶ್ವಮೇಧ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣ ಪ್ರಾರಂಭಿಸಲಾಯಿತು.

ಮೊದಲ ತಾಣ ಮದ್ದೂರಿನ ಹೊಳೆ ಆಂಜನೇಯಸ್ವಾಮಿ ದೇವಾಲಯ. ಶಿಂಶಾ ನದಿಯ ತೀರದಲ್ಲಿರುವ ಈ ದೇವಾಲಯ ಪ್ರಕೃತಿಯ ಸೌಂದರ್ಯವನ್ನು ಹರಡುತ್ತದೆ. ದೇವರ ದರ್ಶನದ ಜೊತೆಗೆ, ಇಲ್ಲಿ ಬಿಸಿ ಬಿಸಿ ರುಚಿಕರವಾದ ಇಡ್ಲಿ, ವಡೆ, ಉಪ್ಪಿಟ್ಟು, ಕೇಸರಿ ಬಾತ್ ಮತ್ತು ಕಾಫಿ ಸೇವಿಸಿ, ಮುಂದಿನ ಪ್ರಯಾಣವನ್ನು ಮುಂದುವರಿಸಲಾಯಿತು.

ಮುಂದಿನ ತಾಣ ಮದ್ದೂರಿನ ಅರ್ಜುನಪುರಿ ಲಕ್ಷ್ಮೀ ನರಸಿಂಹ ದೇವಾಲಯ. ದರ್ಶನ ಮಾಹಿತಿಗಳೊಂದಿಗೆ ನಂತರ ಸೋಮನಾಥಪುರ ಕೇಶವ ದೇವಸ್ಥಾನ ವೀಕ್ಷಿಸಲಾಯಿತು.

ಕೇಶವ ದೇವಸ್ಥಾನದಲ್ಲಿ ದೇವರ ಮೂರ್ತಿಗಳು ಹಾನಿಗೊಳಗಾಗಿರುವುದರಿಂದ ಪೂಜೆ ನಡೆಯುತ್ತಿರಲಿಲ್ಲ. ಆದರೆ ಗತಕಾಲದ ಹೊಯ್ಸಳ ಶಿಲ್ಪಕಲೆಯ ಶೈಲಿಯಲ್ಲಿ ವಿಶಿಷ್ಟ ದೃಶ್ಯಗಳು ಈ ದೇವಸ್ಥಾನದ ಶೋಭೆಯನ್ನು ಹೆಚ್ಚಿಸುತ್ತಿದ್ದವು.



ಶ್ರೀಮತಿ ಪ್ರವೀಣ ಗೋಪಾಲ ಕೃಷ್ಣ

ಮಧ್ಯಾಹ್ನ 1.30ಕ್ಕೆ ತಲಕಾಡು ತಲುಪಿ, ಶ್ರೀ ಕೃಷ್ಣ ಮಠದಲ್ಲಿ ಶುಚಿ ರುಚಿಯಾದ ಭೋಜನವನ್ನು ಸವಿದು, ನಂತರ ಶ್ರೀ ವೈದ್ಯನಾಥೇಶ್ವರ ದೇವಾಲಯ ಹಾಗೂ ಸುತ್ತಮುತ್ತಲಿನ ಪ್ರಸಿದ್ಧ ದೇವಾಲಯಗಳನ್ನು ವೀಕ್ಷಿಸಲಾಯಿತು. ಪ್ರಯಾಣದ ವೇಳೆ ಸದಸ್ಯರೆಲ್ಲಾ ದೇವರನಾಮಗಳು, ಚಲನಚಿತ್ರ ಹಾಡುಗಳು, ಹೌಸಿ ಹೌಸಿ, ಅಂತ್ಯಾಕ್ಷರಿ, ತಾಳ–ತಮಟೆ, ಬುದ್ಧಿವಂತಿಕೆಯ ಪ್ರಶ್ನೋತ್ತರ, ಮುಂತಾದ ಆಟ–ಪಾಠಗಳಲ್ಲಿ ತೊಡಗಿದರು. ಬಸ್‌ನಲ್ಲಿ ಎಲ್ಲರೂ ಸಕ್ರಿಯವಾಗಿ ಭಾಗವಹಿಸಿದರು. ಮಕ್ಕಳ ಉತ್ಸಾಹ ಪ್ರವಾಸವನ್ನು ಇನ್ನಷ್ಟು ರಂಜಕಗೊಳಿಸಿತು. ಆನಂದ ಬಳಗದ 2025ರ ಕ್ಯಾಲೆಂಡರ್ ಹಾಗೂ ಆನಂದ ಮಿಲನ ಕಾರ್ಯಕ್ರಮದ ಟಿಕೆಟ್ ಪಾಸ್ ಹಂಚಲಾಯಿತು.

ಸಂಯೋಜಕರಾದ ಶ್ರೀ ನಾಗರಾಜ ಉಪಾಧ್ಯಾಯರು, ಹಣ್ಣು, ಚಾಕೊಲೇಟ್, ಕುಡಿಯುವ ನೀರು ಮುಂತಾದವುಗಳನ್ನು ಹಂಚುವ ಮೂಲಕ ಎಲ್ಲಾ ಸದಸ್ಯರನ್ನು ಸಂತೋಷಗೊಳಿಸಿದರು.

ಅದಾದ ಬಳಿಕ ಶಿವನಸಮುದ್ರ, ಗಗನಚುಕ್ಕಿ ಜಲಪಾತದ ಬಳಿ ತಲಪಲಾಯಿತು. ಇಲ್ಲಿ ಕಾವೇರಿ ನದಿ 300 ಅಡಿ ಎತ್ತರದಿಂದ ಬೀಳುವ ದೃಶ್ಯವು ಮನಮೋಹಕವಾಗಿತ್ತು.



ಶಿವನ ಸಮುದ್ರದ ಗಗನಚುಕ್ಕಿ ಯ ಸುಂದರವಾದ ತಾಣದಲ್ಲಿ ಮುಸ್ಸಂಜೆಯ, ಕಾಫಿ ಮತ್ತು ತಿಂಡಿಗಳೊಂದಿಗೆ ಸದಸ್ಯರು ತಮ್ಮ ಕುಟುಂಬದ ಪರಿಚಯವನ್ನು ಬಹಳ ಸುಂದರವಾಗಿ ಮಾಡಿ ಕೊಟ್ಟರು. ನಂತರ ಶ್ರೀ ನಾಗರಾಜ ಉಪಾಧ್ಯಾಯರಿಗೆ ಶಾಲು ಹೊದಿಸಿ ಎಲ್ಲರ ಸಮ್ಮುಖದಲ್ಲಿ ಗೌರವಿಸಲಾಯಿತು.

ಅಲ್ಲಿಂದ ಮುಂದಿನ ನಮ್ಮ ಪಯಣ ಕಡೆಯ ನಿಲ್ದಾಣ ವಾಗಿತ್ತು. ಪ್ರಯಾಣದ ಮಧ್ಯೆ ರಾತ್ರಿಯ ಲಘು ಉಪಹಾರವನ್ನೂ ಹಂಚಲಾಯಿತು. ರಾತ್ರಿ 10 ಗಂಟೆಗೆ ವುಡ್‌ಲ್ಯಾಂಡ್ಸ್ ಹೋಟೆಲ್ ತಲುಪಿದಾಗ, ಸದಸ್ಯರಿಗೆ ಶ್ರೀ ಉಪಾಧ್ಯಾಯರು ಆತ್ಮೀಯತೆಯಿಂದ ವಿದಾಯ ಹೇಳಿದರು. ಅವರ ಆತಿಥ್ಯ ಮತ್ತು ಸಮರ್ಪಕ ಕಾರ್ಯಕ್ರಮದಿಂದ ಈ ಪ್ರವಾಸ ಎಲ್ಲರ ಮನಸ್ಸಿನಲ್ಲಿ ಚಿರಸ್ಥಾಯಿಯಾಯಿತು.

ಅನಂದ ಬಳಗದ ಈ ಪ್ರಯಾಣವು ಕೇವಲ ಸಾಂಸ್ಕೃತಿಕ ಪ್ರವಾಸವಲ್ಲ, ಬದಲಾಗಿ ಸಹಭಾಗಿತ್ವ, ಸಂತೋಷ ಮತ್ತು ಆಧ್ಯಾತ್ಮದ ಸಂಗಮವಾಗಿತ್ತು.

ಪ್ರಕೃತಿಯ ಸೌಂದರ್ಯ, ಶಿಲ್ಪಕಲೆಯ ವೈಭವ, ದೇವಾಲಯಗಳ ದರ್ಶನ ಹಾಗೂ ಸಹಯಾತ್ರಿಕರ ನಡುವಿನ ಹತ್ತಿರದ ನಂಟು–ಈ ಎಲ್ಲಾ ಅಂಶಗಳು ಈ ಪ್ರಯಾಣವನ್ನು ವಿಶಿಷ್ಟ, ಸುಸ್ಮರಣೆಯ ಮತ್ತು ಜೀವನದ ಆಶಯಗಳನ್ನು ಉತ್ತೇಜಿಸುವ ಅನುಭವವನ್ನಾಗಿ ರೂಪಿಸಿದವು.




ವಿಶ್ವೇಶ ವಿಜಯ ವಿಶ್ರಾಂತಿ ಧಾಮ

ಹಿರಿಯಚೇತನಗಳ ವಾನಪ್ರಸ್ಥ ನೆಮ್ಮದಿಯ ಜೀವನಕ್ಕಾಗಿ ಪೇಜಾವರ ಮಠವು ಪ್ರಾತಃಸ್ಮರಣಿಯ ವಿಶ್ವೇಶತೀರ್ಥರ ಮಾರ್ಗದರ್ಶನದಂತೆ ಚನ್ನಪಟ್ಟಣ ತಾಲ್ಲೂಕು ಅಬ್ಬೂರು ಬ್ರಹ್ಮಣ್ಯತೀರ್ಥರ ವೃಂದಾವನದ ಹತ್ತಿರ ಪೂಜ್ಯರಿಂದ ಭೂಮಿಪೂಜೆ ಮಾಡಲ್ಪಟ್ಟ 36 ಕೊಠಡಿಗಳ ವಿಶ್ರಾಂತಿಧಾಮವನ್ನು ನಿರ್ಮಿಸಲಾಗಿದ್ದು, ವಸತಿಗಾಗಿ ಸಿದ್ದವಾಗಿದೆ. ಎಲ್ಲಾ ವ್ಯವಸ್ಥೆಗಳನ್ನು ಒಳಗೊಂಡ ಸುಸಜ್ಜಿತ ವಿಶ್ರಾಂತಿಧಾಮವು ಪೇಜಾವರ ಮಠಾಧೀಶರಾದ ಶ್ರೀ.ಶ್ರೀ.ವಿಶ್ವಪ್ರಸನ್ನತೀರ್ಥರಿಂದ ಉದ್ಘಾಟನೆಯಾಗಿದೆ. ಈ ಅನುಕೂಲತೆಗಳನ್ನು ಉಪಯೋಗಿಸಿಕೊಳ್ಳಲು ಬಯಸುವವರು ಸಂಪರ್ಕಿಸಬಹುದಾಗಿದೆ.

ವಿಳಾಸ:
ವಿಶ್ವೇಶ ವಿಜಯ ವಿಶ್ರಾಂತಿ ಧಾಮ
ಅಬ್ಬೂರು ದೊಡ್ಡಿ, ಕಸಬ ಹೋಬಳಿ
ಚನ್ನಪಟ್ಟನ ತಾಲ್ಲೂಕು, ರಾಮನಗರ ಜಿಲ್ಲೆ, 562106

ಸಂಪರ್ಕಿಸಿ
ಅಪರ್ಣಾ ಶ್ರೀನಿವಾಸನ್
ಮೊ.ನಂ. 9964548154



**ANANDA SABHA GRUHA**
A UNIT OF ANANDA BALAGA CHARITABLE TRUST



- Capacity: Up to 800 guests.
- Ideal for weddings, receptions, and ceremonies.
- Parking: Ground and basement levels.
- Dining: 300-seat capacity.
- Modern kitchen with the latest equipment.
- Power: Generator facility available.
- Accommodation: Bride, groom, and 10 guest rooms.

E-mail:
anandasabhagruha@gmail.com
Website:
anandasabhagruha.com

# 23, Gollahalli,
Bannerghatta Main Road,
Bannerghatta, Bangalore - 560 083.

For Booking Contact
U. N. Ramamoorthy Upadhya
9148448248

# ಆನಂದ ಸಭಾಗೃಹದಲ್ಲಿ ಹೋಮ ಹವನಗಳು



ಆನಂದ ಬಳಗ ಚಾರಿಟೇಬಲ್ ಟ್ರಸ್ಟ್ (ಎ.ಬಿ.ಸಿ.ಟಿ) ಮತ್ತು ಆನಂದ ಬಳಗ ಜೊತೆಗೂಡಿ ಬನ್ನೇರುಘಟ್ಟ ರಸ್ತೆಯಲ್ಲಿ ನಿರ್ಮಿಸಿದ ಆನಂದ ಸಭಾಗೃಹ ಉದ್ಘಾಟನೆಯಾಗಿ 14 ವರ್ಷಗಳು ಕಳೆದಿದ್ದು ಸಭಾಗೃಹದ ಶ್ರೀರಕ್ಷೆಗಾಗಿ ಮತ್ತು ಅಭಿವೃದ್ಧಿಗಾಗಿ ವಾಸ್ತು ಹೋಮ, ಸುದರ್ಶನ ಹೋಮ ಮತ್ತು ಗಣ ಹೋಮವನ್ನು ನಡೆಸಲಾಗಿದೆ. ಟ್ರಸ್ಟ್‌ನ ನೇತೃತ್ವದಲ್ಲಿ ದಿ: 25.10.2024ರ ಶುಕ್ರವಾರ ಸಂಜೆ ವಾಸ್ತು ಹೋಮ ಮತ್ತು ಸುದರ್ಶನ ಹೋಮ ಹಾಗೂ 26.10.2024ರ ಶನಿವಾರ ಪ್ರಾತಃಕಾಲ 6 ತೆಂಗಿನಕಾಯಿಯ ಗಣಹೋಮವನ್ನು ಸಂಯೋಜಿಸಲಾಗಿತ್ತು. ವೇ.ಮೂ. ಶ್ರೀ ವಿಷ್ಣುಮೂರ್ತಿ ನರಳಾಯರ ಪೌರೋಹಿತ್ಯದಲ್ಲಿ ನಡೆದ ಶುಕ್ರವಾರ ಸಂಜೆಯ ಹೋಮದ ಸಂದರ್ಭದಲ್ಲಿ ಟ್ರಸ್ಟ್‌ನ ಟ್ರಸ್ಟಿಗಳು, ಆನಂದ ಬಳಗದ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಮಹಿಳಾ ವಿಭಾಗದ ಕಾರ್ಯಕಾರಿ ಸಮಿತಿಯ ಹೆಚ್ಚಿನ ಸದಸ್ಯರು ಪಾಲ್ಗೊಂಡಿದ್ದರು. ಆನಂದ ಬಳಗದ ಅಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ ದಂಪತಿಗಳು ಪವಿತ್ರಪಾಣಿಯಾಗಿ ಎರಡೂ ದಿವಸದ ಕಾರ್ಯಕ್ರಮಗಳನ್ನು ಸಾಂಗವಾಗಿ ನಿರ್ವಹಿಸಿದರು. ಶುಕ್ರವಾರ ಹೋಮ ಹವನಗಳ ನಂತರ ಭೋಜನ ಹಾಗೂ ಮರುದಿನ ಗಣ ಹೋಮದ ನಂತರ ಉಪಾಹಾರದ ವ್ಯವಸ್ಥೆಯನ್ನು ಎ.ಬಿ.ಸಿ.ಟಿಯ ಉದಾರಿ ಟ್ರಸ್ಟಿಯೊಬ್ಬರು ಪ್ರಾಯೋಜಿಸಿದ್ದರು.

ಎಂ. ಸತ್ಯನಾರಾಯಣ ಭಟ್




ಆನಂದ ಬಳಗದ 2025 ನೇ ಸಾಲಿನ ಕ್ಯಾಲೆಂಡರನ್ನು ಡಿಸೆಂಬರ್ 14, 2024ರಂದು ಕಮಿಟಿ ಮೀಟಿಂಗ್ ನಡುವೆ ಯುವ ವಿಭಾಗದ ಸಂಚಾಲಕರಾದ ಶ್ರೀ ಗುರುರಾಜ ಪೇಜಾವರ್‌ರವರು ಹೋಟೆಲ್ ಅಜಂತದಲ್ಲಿ ವಿದ್ಯುಕ್ತವಾಗಿ ಬಿಡುಗಡೆ ಮಾಡಿದರು.



ಆನಂದ ಬಳಗದ ವಿದ್ಯಾ ಸಹಾಯ ನಿಧಿ (ಇಎಪಿ) ಯಿಂದ ದ್ವಿತೀಯ ಪಿಯುಸಿಯಲ್ಲಿ ಶೇ. 91.5 ಅಂಕ ಪಡೆದು ಆರ್.ಎನ್.ಎಸ್.ಐ.ಟಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ಶ್ರೀ ಸಚಿನ್‌ರವರ ತಾಯಿ ಶ್ರೀಮತಿ ಭಾರತಿ ಹತ್ವಾರ್‌ರವರು ಇಎಪಿ ಸಂಚಾಲಕರಾದ ಶ್ರೀ ರಾಧಾಕೃಷ್ಣ ರವರಿಂದ ಸಹಾಯಧನ ಪಡೆದರು

ಆನಂದ ಬಳಗ ಮಹಿಳಾ ವಿಭಾಗ

# ವಧು-ವರಾನ್ವೇಷಣೆ ವೇದಿಕೆ ನಡೆದು ಬಂದ ದಾರಿ

ಆನಂದ ಬಳಗದ ಅಂಗ ಸಂಸ್ಥೆಯಾದ ಮಹಿಳಾ ವಿಭಾಗವು ವಧು ವರಾನ್ವೇಷಣಾ ವೇದಿಕೆಯನ್ನು ಪ್ರಾರಂಭಿಸಿ 25 ವರ್ಷಗಳಾದುವು. ಶ್ರೀಮತಿ ಸುನಂದಾ ನಾರಾಯಣ ಮೂರ್ತಿ ಹಾಗೂ ಶ್ರೀಮತಿ ಗೀತಾ ವಾಸುದೇವರಾವ್ ಇವರ ನೇತೃತ್ವದಲ್ಲಿ ಮಹಿಳಾ ವಿಭಾಗವು ಅಸ್ತಿತ್ವಕ್ಕೆ ಬಂದಿತು. ಆನಂದ ಬಳಗದ ಪ್ರಥಮ ವಾರ್ಷಿಕೋತ್ಸವದ ದಿನದಂದು ಮಹಿಳಾ ವಿಭಾಗದ ಪ್ರಾರಂಭೋತ್ಸವವನ್ನು I.A.S. ಅಧಿಕಾರಿಯಾದ ಶ್ರೀಮತಿ ಉಷಾ ಗಣೇಶ್‌ರವರು ಉದ್ಘಾಟಿಸಿದರು. ಪ್ರಾರಂಭದಲ್ಲಿ ಮಹಿಳೆಯರಿಗೆ ಉಪಯುಕ್ತ ವಾಗುವ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾ ಸದಸ್ಯೆಯರ ಪ್ರಶಂಸೆಗೆ ಪಾತ್ರವಾಗಿತ್ತು.

ನಮ್ಮ ಸಮಾಜ ಬಾಂಧವರು ವಧು–ವರ ಅನ್ವೇಷಣೆಗಾಗಿ ಪಡುವ ಕಷ್ಟಗಳನ್ನು ಕಂಡು ನಾವು ಆ ಬಗ್ಗೆ ಏನಾದರೂ ಮಾಡಬೇಕು ಎಂದು ಪ್ರಾರಂಭದಲ್ಲಿ ಎರಡು ಬಾರಿ 'ವಧು–ವರರ ಸಮ್ಮಿಲನ' ಎಂಬ ಕಾರ್ಯಕ್ರಮವನ್ನು ಆಯೋಜಿಸಿದೆವು. ಇದರ ಪ್ರಯೋಜನವನ್ನು ಬಹಳಷ್ಟು ಬಾಂಧವರು ಪಡೆದರು ಮತ್ತು ಇಂತಹ ಕಾರ್ಯಕ್ರಮಕ್ಕೆ ಹೆಚ್ಚಿನ ಬೇಡಿಕೆ ಬರಲು ಪ್ರಾರಂಭವಾಗಿ ನಾವು ಇದರ ಬಗ್ಗೆ ಯೋಚಿಸುವಂತಾಯಿತು. ಈ ಸಮಯ ಬಳಗದ ಸದಸ್ಯರಾದ ಶ್ರೀಯುತ ಪಿ.ಆರ್. ರಾವ್‌ರವರು ಈ ಬಗ್ಗೆ ಒಂದು ಸಲಹೆಯನ್ನು ಬಳಗದ ಮುಂದಿಟ್ಟರು. ಬಳಗದ ಸಹಾಯದಿಂದ ವೇದಿಕೆಯನ್ನು ಸ್ಥಾಪಿಸುವ ಯೋಜನೆ ಯೊಂದನ್ನು ವುಡ್‌ಲ್ಯಾಂಡ್ಸ್ ಹೊಟೇಲಿನ ಮಾಲೀಕರಾದ ಶ್ರೀಯುತ ವಾಸುದೇವ ರಾಯರಲ್ಲಿ ಪ್ರಸ್ತಾಪಿಸಿದರು. ತಕ್ಷಣವೇ 'ನಿಮಗೆ ಏನು ಬೇಕೋ ಎಲ್ಲಾ ಸೌಕರ್ಯವನ್ನು ನಾನು ಮಾಡಿಕೊಡುತ್ತೇನೆ, ನೀವು ಪ್ರಾರಂಭಿಸಿ' ಎಂಬ ಮಾತು ಕೊಟ್ಟು ಅದರಂತೆ ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ಮಹಿಳಾ ವಿಭಾಗದ ಅಧ್ಯಕ್ಷರಾದ ಶ್ರೀಮತಿ ಗೀತಾವಾಸುದೇವರಾವ್‌ರವರ ನೇತೃತ್ವದಲ್ಲಿ 25 ವರ್ಷ ಗಳಿಂದ ನಡೆದುಕೊಂಡುಬರುತ್ತಿದೆ.

ಪ್ರಾರಂಭದಲ್ಲಿ ಕಡಿಮೆ ಸಂಖ್ಯೆಯಲ್ಲಿ ನೋಂದಣಿ ಯಾದರೂ ಕ್ರಮೇಣ ಅಧಿಕ ಸಂಖ್ಯೆಯಲ್ಲಿ ಪೋಷಕರು ಬರಲು ಪ್ರಾರಂಭಿಸಿ, ಇದು ಇಡೀ ಭಾರತದಲ್ಲಿರುವ ದಕ್ಷಿಣ ಕನ್ನಡದ ಬಾಂಧವರು ಇದರ ಪ್ರಯೋಜನವನ್ನು ಪಡೆದಿರುತ್ತಾರೆ ಮತ್ತು ಪರದೇಶದಲ್ಲಿರುವವರೂ ಕೂಡ ನಮ್ಮಲ್ಲಿ ನೋಂದಣಿ ಮಾಡಿ ಅನೇಕ ವಿವಾಹಗಳು



ನಡೆದಿವೆ ಎಂದು ತಿಳಿಸಲು ಸಂತೋಷವಾಗುತ್ತದೆ. ನಮ್ಮ ವೇದಿಕೆಯು ಶಿಸ್ತುಬದ್ಧವಾಗಿ ನಡೆಸುತ್ತಿರುವ ವಿಧಾನವನ್ನು ಬೇರೆ ಸಂಸ್ಥೆಯವರೂ ಕೂಡಾ ಅನುಸರಿಸು ತ್ತಿದ್ದಾರೆ. ಇದೂ ಕೂಡ ನಮಗೆ ಹೆಮ್ಮೆಯ ವಿಷಯ. ಇದು ನಮ್ಮ ಕಾರ್ಯಕಾರಿ ಸಮಿತಿಯ ಸದಸ್ಯರ ನಿಸ್ವಾರ್ಥ ನಗು ಮೊಗದ ಸೇವೆಯಿಂದ ಸಾಧ್ಯವಾಗಿದೆ. ಈವರೆಗೆ ಸುಮಾರು 10 ಸಾವಿರದವರೆಗೆ ವಿವಾಹಗಳು ಜರುಗಿವೆ ಎಂದು ತಿಳಿಸಲು ಸಂತೋಷವಾಗುತ್ತದೆ. ಮಹಿಳಾ ವಿಭಾಗದಿಂದ ನಮ್ಮ ಸಮಾಜಕ್ಕೆ ಅಳಿಲು ಸೇವೆ ಸಲ್ಲಿಸಿದ ಒಂದು ಸಾರ್ಥಕತೆಯ ಭಾವದಿಂದ ಮನಸ್ಸು ತುಂಬಿ ಬರುತ್ತದೆ.

ಹಾಗೆಯೇ 25 ವರ್ಷದಿಂದ 50 ವರ್ಷ 75 ರಿಂದ 100 ವರ್ಷ ಈ ಸೇವೆ ಸಲ್ಲಿಸಲು ಮುಂದಿನ ಪೀಳಿಗೆಯವರ ಪಾತ್ರಮುಖ್ಯ. ಗೀತಾವಾಸುದೇವರಾವ್ ದಂಪತಿಯವರ ಸಹಕಾರ ಹಾಗೂ ಅವರ ಮಕ್ಕಳ ಪ್ರೋತ್ಸಾಹದಿಂದ ಹೀಗೆ ಮುಂದುವರಿದು ನಿರಂತರವಾಗಿ ಸಮಾಜಸೇವೆ ನಡೆದುಕೊಂಡು ಬರಲಿ ಎಂಬುದೇ ನಮ್ಮ ಆಶಯ.

**– ಪಿ. ಗೀತಾರಾವ್**

### ಸದಸ್ಯರಲ್ಲಿ ಮನವಿ

ಸದಸ್ಯರು ಭೃಗುವಾಣಿ ಪತ್ರಿಕೆಗೆ ಲೇಖನಗಳನ್ನು ಈ ಕೆಳಗಿನ ಮೇಲ್ ಐಡಿಗೆ ಬರೆದು ಕಳುಹಿಸಿ. ತಾವು ಕಳುಹಿಸುವ ಬರಹಗಳು ಸಂಸ್ಕಾರ, ದೇವಸ್ಥಾನಗಳು, ಆಚಾರ ವಿಚಾರಗಳು, ಅಡುಗೆ, ವ್ಯಾಪಾರ ವ್ಯವಹಾರಕ್ಕೆ ಸಂಬಂಧಪಟ್ಟವುಗಳಾಗಿರಲಿ.

krispa8888@gmail.com



BAYAR'S
COFFEE
The Warmth of Goodness!
ಬಾಯರ್ಸ್
ಕಾಫೀ
ಅತ್ಯುತ್ತಮ ರುಚಿ
ಮನ ಅರಳಿಸುವ ಪರಿಮಳ
BAYAR'S COFFEE
The Warmth of Goodness!
80 DEGREE
Experience Premium Filter Coffee
A rich and premium blend made of the highest quality coffee beans. 80 Degree Coffee will keep your mornings fascinating and drive you for the day. This amazing coffee offers ground breaking taste to elevate your coffee experience.
200 g
BAYAR'S
Kohinoor Tea
GOLD
ಆಯ್ದ ಶ್ರೇಷ್ಠ ಕಾಫಿ ಬೀಜಗಳಿಂದ ತಯಾರಾದ ಪಕ್ವತೆಯ
ಮಿಶ್ರಣ ಪರಿಪೂರ್ಣ ರುಚಿಯೊಂದಿಗೆ, ಎಂದೆಂದಿಗೂ ನಿಮಗಾಗಿ

# ಸನಾತನ ಧರ್ಮದಲ್ಲಿ ಮಕರ ಸಂಕ್ರಾಂತಿ

ವರುಷದ ಮೊದಲನೆಯ ಹಬ್ಬವೇ 'ಮಕರ ಸಂಕ್ರಾಂತಿ' ಹಾಗಾಗಿ ಈ ಹಬ್ಬವನ್ನು ಭಾರತದ ಹೆಚ್ಚಿನ ಎಲ್ಲಾ ಭಾಗಗಳಲ್ಲಿಯೂ ಅತ್ಯಂತ ಸಂತೋಷ ಸಂಭ್ರಮದಿಂದ ಆಚರಿಸುತ್ತಾರೆ.

'ಸೂರ್ಯದೇವ'ರ ಹಬ್ಬವೆಂದು ಪರಿಗಣಿಸಲಾದ ಈ ಶುಭ ಸಂಭ್ರಮದ ಹಬ್ಬವನ್ನು ಪ್ರತಿವರುಷವೂ ಜನವರಿ ತಿಂಗಳ 14 ಅಥವಾ 15ರಂದು ಆಚರಿಸಲಾಗುತ್ತದೆ.

ವಿಶ್ವದೆಲ್ಲೆಡೆ ಕಣ್ಣಿಗೆ ಕಾಣುವ, ಸಕಲ ಜೀವರಾಶಿಗಳಿಗೂ ಜೀವದೇವನಾಗಿರುವ ಭಗವಾನ್ ಶ್ರೀ ಸೂರ್ಯನಾರಾಯಣ ಸ್ವಾಮಿಯು ದಕ್ಷಿಣಾಯಣದಿಂದ ಉತ್ತರಾಯಣದ ಮಕರ ರಾಶಿಯನ್ನು ಪ್ರವೇಶಿಸಿದಾಗ 'ಮಕರ ಸಂಕ್ರಾಂತಿ' ಹಬ್ಬವನ್ನು ಆಚರಿಸಲಾಗುತ್ತದೆ. ಜನರು ನದಿಯಲ್ಲಿ ಮುಂಜಾನೆ ಪವಿತ್ರ ಸ್ನಾನ ಮಾಡುವ ಅಥವಾ ಮನೆಯಲ್ಲಿಯೇ ಪವಿತ್ರ ಜಲದಿಂದ ಸ್ನಾನ ಮಾಡುವ ಮೂಲಕ ಈ ಹಬ್ಬವನ್ನು ಆಚರಿಸಲು ಪ್ರಾರಂಭಿಸುತ್ತಾರೆ. ಮನೆಯಲ್ಲಿ ಶ್ರದ್ಧಾ ಭಕ್ತಿಯಿಂದ ದೇವರಿಗೆ ದೀಪ ಹಚ್ಚಿ, ಶುಭ್ರವಾದ ಪಾತ್ರೆಗಳಲ್ಲಿ ಮುಖ್ಯವಾಗಿ ಎಳ್ಳು ಬೆಲ್ಲ, ಕಬ್ಬು, ಜೊತೆಯಲ್ಲಿ ಇನ್ನಿತರ ಅವರ ಇಷ್ಟವಾದ ಸಮರ್ಪಣ ಹಣ್ಣುಗಳನ್ನಿಟ್ಟು ದೇವರ ಮುಂದೆ ಪ್ರಾರ್ಥಿಸುತ್ತಾರೆ.

ಸೂರ್ಯ ದೇವರ ಪ್ರಾರ್ಥನಾ ಶ್ಲೋಕಗಳನ್ನು ಕೂಡ ತಿಳಿದವರು ಪಠಿಸುತ್ತಾರೆ. ಹೆಂಗಳೆಯರು ಮನೆಯ ಮುಂದೆ ವಿವಿಧ ರೀತಿಯ ರಂಗೋಲಿಗಳನ್ನು, ಚಿತ್ತಾರಗಳನ್ನು ಅವರಿಗೆ ಇಷ್ಟವಾದ ರೀತಿಯಲ್ಲಿ ಬಿಡಿಸಿ ಸಂಭ್ರಮಿಸುತ್ತಾರೆ.

ಈ ದಿನ ಜನರು ಎಳ್ಳು ಬೆಲ್ಲದ ವಿವಿಧ ಸಿಹಿತಿಂಡಿಗಳನ್ನು ತಯಾರಿಸಿ ಸೂರ್ಯದೇವನಿಗೆ ಅರ್ಪಿಸಿ, ಇತರರೊಂದಿಗೆ ಹಂಚಿಕೊಂಡು 'ಎಳ್ಳು ಬೆಲ್ಲ ತಿಂದು ಒಳ್ಳೆ ಒಳ್ಳೆಯದಾಗಿ ಮಾತನಾಡಿ' ಎಂದು ಹೇಳುತ್ತಾ ಸೌಜನ್ಯದ ಮಾತುಗಳಿಂದ ನಗುನಗುತ್ತಾ ಸ್ನೇಹ ಸಂಬಂಧಗಳನ್ನು ಹೆಚ್ಚಿಸುತ್ತಾರೆ.





ಟಿ.ಎಸ್. ನಾಗರಾಜ ಉಪಾಧ್ಯಾಯ

ಈ ಹಬ್ಬದ ದಿನದಂದು ಹಲವಾರು ಕಡೆಗಳಲ್ಲಿ ಜನರು ವಿಶಾಲವಾದ ಎತ್ತರವಾದ ಸ್ಥಳಗಳಲ್ಲಿ ನಿಂತು ವೈವಿಧ್ಯಮಯ ಗಾಳಿಪಟಗಳನ್ನು ಕೂಡ ಹಾರಿಸಿ ಮಕ್ಕಳೊಂದಿಗೆ ಸಂತೋಷಪಡುತ್ತಾರೆ.

ಸುಗ್ಗಿಯ ಕಾಲದಲ್ಲಿ ಆಚರಿಸುವ ಹಬ್ಬವೇ ಈ 'ಮಕರ ಸಂಕ್ರಾಂತಿ'. ಈ ದಿನದಂದು ರೈತರು ಕೃಷಿಯಲ್ಲಿ ಬಳಸುವ ನೇಗಿಲು, ಗುದ್ದಲಿ, ಗೂಳಿ, ಹಸುಗಳನ್ನು ಪೂಜಿಸುತ್ತಾರೆ. ತಮ್ಮ ಎತ್ತು ಹಸುಗಳನ್ನು ಅಲಂಕರಿಸಿ, ವಿಶಾಲವಾದ ಸ್ಥಳಗಳಲ್ಲಿ ಹುಲ್ಲಿನ ಮೂಲಕ ಬೆಂಕಿಯನ್ನು ಹಾಕಿ, ಅದರಲ್ಲಿ ಓಡಿಸಿ ಭೂತ ಚೇಷ್ಟೆ, ದೃಷ್ಟಿಗಳನ್ನು ತೆಗೆಸುವ ವಾಡಿಕೆ ಇದೆ.

ಈ ಹಬ್ಬವು ಚಳಿಗಾಲದ ಅಂತ್ಯವನ್ನು ಮತ್ತು ಬೇಸಿಗೆಯ ಆಗಮನವನ್ನು ಸೂಚಿಸುತ್ತದೆ. ಬೆಳೆಗಳ ಉತ್ತಮ ಇಳುವರಿಗಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಲು, ರೈತರ ಮೇಲೆ ಸೂರ್ಯದೇವರ ಆಶೀರ್ವಾದ ಸದಾ ಇರುವಂತೆ ಈ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಗುತ್ತದೆ. ಹಳೆಯ ಕಹಿ ನೆನಪು ಹಾಗೂ ಅಸಮಾಧಾನವನ್ನು ಬಿಟ್ಟು ಎಲ್ಲರನ್ನೂ ಪ್ರೀತಿಸುವ ಅವಕಾಶವನ್ನು ಈ ಹಬ್ಬವು ವಿಶೇಷವಾಗಿ ಪ್ರೇರೇಪಿಸುತ್ತದೆ. ಈ ಹಬ್ಬವು ನಮ್ಮ ಪೂರ್ವಜರ ಸ್ಮರಣೆಗೂ ಸೂಕ್ತ ದಿನ ಎಂದು ಹೇಳಲಾಗುತ್ತದೆ. ಇಂತಹ ಹಬ್ಬದ ಆಚರಣೆಯಿಂದ ಒಬ್ಬರಿಗೊಬ್ಬರು ಒಗ್ಗಟ್ಟಿನಿಂದ, ಸದ್ಭಾವನೆಯಿಂದ ಜೀವಿಸಲು ಪ್ರೇರೇಪಿಸುತ್ತದೆ.

ಈ ಹಬ್ಬವನ್ನು ಇತರ ದೇಶಗಳಾದ, ನೇಪಾಳ, ಬಾಂಗ್ಲಾ, ಪಾಕಿಸ್ತಾನ, ಶ್ರೀಲಂಕಾ ಮತ್ತಿತರ ವಿವಿಧ ಸನಾತನ ಧರ್ಮವನ್ನು ಪಾಲಿಸುವ ದೇಶಗಳಲ್ಲೂ ಆಚರಿಸುವ ಆಸಕ್ತ ಜನರು ಇದ್ದಾರೆ.

ನಮ್ಮೆಲ್ಲರ ಪ್ರತ್ಯಕ್ಷ ದೇವನಾದ ಭಗವಾನ್ ಶ್ರೀ ಸೂರ್ಯ ನಾರಾಯಣ ಸ್ವಾಮಿಯನ್ನು ಪ್ರತಿದಿನವೂ ಸೂರ್ಯೋದಯದಲ್ಲಿ ಸೂರ್ಯನಮಸ್ಕಾರದ ಮೂಲಕ ಪೂಜಿಸಿದರೆ ಋಷಿಮುನಿಗಳು, ಹಿರಿಯರು ತಿಳಿಸಿದಂತೆ ನಮ್ಮ ಆಯಸ್ಸು, ಆರೋಗ್ಯ ಖಂಡಿತ ವಾಗಿಯೂ ವೃದ್ಧಿಯಾಗುವುದು. ನಿತ್ಯವೂ ಈ ಕೆಳಗಿನ ಒಂದು ಶ್ಲೋಕವನ್ನಾದರೂ ಪಠಿಸುವ ಮೂಲಕ ಸೂರ್ಯ ದೇವರ ಆಶೀರ್ವಾದವನ್ನು ಪಡೆಯೋಣ.

**ಆದಿದೇವ ನಮಸ್ತುಭ್ಯಂ ಪ್ರಸೀದ ಮಮ ಭಾಸ್ಕರ**
**ದಿವಾಕರ ನಮಸ್ತುಭ್ಯ, ಪ್ರಭಾಕರ ನಮೋಸ್ತುತೆ**




# Quality Health Care Made Affordable

# ಗುಣಮಟ್ಟದ ಆರೋಗ್ಯ ಕೈಗೆಟುಕುವ ದರದಲ್ಲಿ

## Facilities | ಸೌಲಭ್ಯಗಳು

| Facilities | ಸೌಲಭ್ಯಗಳು |
|---|---|
| 150 beds multi-specialty hospital | 150 ಹಾಸಿಗೆಗಳ ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆ |
| State of the art modern Operating Theatres | ಅತ್ಯಾಧುನಿಕ ಆಧುನಿಕ ಆಪರೇಟಿಂಗ್ ಥಿಯೇಟರ್‌ಗಳು |
| Standalone Maternity & Neonatal Unit | ಪ್ರತ್ಯೇಕ ಹೆರಿಗೆ ಮತ್ತು ನವಜಾತ ಶಿಶು ಘಟಕ |
| 12 bedded Intensive Care Unit | 12 ಹಾಸಿಗೆಗಳ ತೀವ್ರ ನಿಗಾ ಘಟಕ |
| 24 Hour Accident & Emergency Unit | 24 ಗಂಟೆಗಳ ಅಪಘಾತ ಮತ್ತು ತುರ್ತು ಘಟಕ |
| 14 bedded Dialysis Unit | 14 ಹಾಸಿಗೆಗಳ ಡಯಾಲಿಸಿಸ್ ಘಟಕ |
| Dedicated area for health check | ಆರೋಗ್ಯ ತಪಾಸಣೆಗಾಗಿ ಮೀಸಲಾದ ಪ್ರದೇಶ |
| Comprehensive Dental Care Unit | ಸಮಗ್ರ ದಂತ ಆರೈಕೆ ಘಟಕ |
| Physiotherapy and Rehabilitation Unit | ಫಿಸಿಯೋಥೆರಪಿ ಮತ್ತು ಪುನರ್ವಸತಿ ಘಟಕ |
| Digital Documentation | ಡಿಜಿಟಲ್ ಡಾಕ್ಯುಮೆಂಟೇಶನ್ |
| 24 Hour Pharmacy | 24 ಗಂಟೆಗಳ ಫಾರ್ಮಸಿ |
| Easy Access with car parking facility | ಕಾರ್ ಪಾರ್ಕಿಂಗ್ ಸೌಲಭ್ಯದೊಂದಿಗೆ ಸುಲಭ ಪ್ರವೇಶ |

+91 94827 09000
WWW.SVMHOSPITALS.COM
INBOX@SVMHOSPITALS.COM
NO 36, KUNDANAHALLI GATE, MARATHAHALLI, BENGALURU 560037

SCAN

# ಪೇಜಾವರ ಅಲ್ಲಲ್ಲ, ಪೂಜಾವರ ಶ್ರೀಗಳು...



ಸುಮಾರು 45 ವರ್ಷಗಳ ಹಿಂದೆ ಪೂಜ್ಯರ ಬಗ್ಗೆ ಸ್ಮರಣ ಪತ್ರಿಕೆಯಲ್ಲಿ ಲೇಖಕರು ಬರೆದ ನೆನಪು. ಹೌದು ನಿಜವಾಗಿ ಇವರು ಪೂಜಾವರರು. ನನ್ನ ಬಾಲ್ಯದ ಹನ್ನೆರಡನೇ ವರ್ಷಕ್ಕೆ ನನ್ನ ಸೋದರ ಮಾವ ಎಸ್.ಆರ್. ಆಚಾರ್ ಜೊತೆಗೆ ಪೇಜಾವರ ಶ್ರೀಗಳು ತಮ್ಮ ಪ್ರಥಮ ಪರ್ಯಾಯದಲ್ಲಿ ಆರಂಭಿಸಿದ ಅಖಿಲ ಭಾರತ ಮಧ್ವ ಮಹಾಮಂಡಲದ ಉದ್ಘಾಟನೆಗೆ ಮೈಸೂರು ಮಹಾರಾಜರಾದ ಶ್ರೀ ಜಯಚಾಮ ರಾಜೇಂದ್ರ ಒಡೆಯರು ಆಗಮಿಸಿದ್ದರು. ಸಾರ್ವಜನಿಕರಿಗೆ ಮರಳು ಹಾಸು ವ್ಯವಸ್ಥೆ ಇತ್ತು. ಆಗ ಈಗಿನ ರಾಜಂಗಣ ಇರಲಿಲ್ಲ. ಶ್ರೀಗಳೊಂದಿಗೆ ಮಹಾರಾಜರು ವೇದಿಕೆಯಲ್ಲಿ ಆಸೀನರಾಗಿದ್ದರು. ನನಗೆ ಭಾಷಣ ಸರಿಯಾಗಿ ಅರ್ಥವಾಗ ದಿದ್ದರೂ ಮಧ್ವಗುರುಗಳ ಹಾಗೂ ಪೇಜಾವರ ಶ್ರೀಗಳ ಸ್ಫೂರ್ತಿ ಉತ್ಸಾಹ ನೀಡಿತ್ತು.

12ನೇ ವರ್ಷದ ನನ್ನ ಒಡನಾಟ ಗುರುಗಳೊಂದಿಗೆ ಮುಂದುವರೆಯಿತು. ಮುಂಬೈನಲ್ಲಿ ನಾನಿದ್ದಾಗ ಗುರುಗಳ ಪ್ರವಚನ 'ರುಯ್ಯ' ಕಾಲೇಜಿನಲ್ಲಿ ನಡೆದಾಗ ನಾನು ಹೋಗುತ್ತಿದ್ದೆ. ಅಲ್ಲಿ ಗುರುಗಳ ಸಂಪರ್ಕ ಬೆಳೆದು ಪರ್ಥ ಗಾಲಿ ಮಠದ ಪ್ರವಚನಕ್ಕೂ ಹೋಗುತ್ತಿದ್ದೆ. ಮುಂಬೈನ ನಮ್ಮ ಮನೆಗೆ ಪಾದ ಪೂಜೆಗೂ ಬಂದಿದ್ದರು.

ಬೆಂಗಳೂರಿಗೆ ಬಂದಮೇಲೆ ಇನ್ನಷ್ಟು ಸಂಪರ್ಕ ಬೆಳೆದು ಮಾಧ್ವ ಮಂಡಲದ ಕಾರ್ಯದರ್ಶಿಯಾಗಿ ಗುರುಗಳು ನನ್ನನ್ನು ಎರಡು ವರ್ಷ ನೇಮಿಸಿದ್ದರು. ಮಾಧ್ವ ಮಂಡಲದ ಸಮ್ಮೇಳನಗಳಲ್ಲಿ ಭಾಗವಹಿಸುತ್ತಿದ್ದೆ. ಗುರುಗಳ ಚಾತುರ್ಮಾಸದ ಪಾಠಗಳಿಗೂ ಹೋಗುತ್ತಿದ್ದೆ. ಗುರುಗಳಿಗೆ ಪಾಠಕ್ಕೆ ಬರುವವರ ಮೇಲೆ ವಿಶೇಷ ಅಭಿಮಾನ. ಬೆಂಗಳೂರಿನ ನಮ್ಮ ಮನೆಗಳಿಗೂ ಪಾದ ಪೂಜೆಗೆ ಆಗಮಿಸುತ್ತಿದ್ದರು. ಒಮ್ಮೆ ಮಾಧ್ವ ಸಮ್ಮೇಳನಕ್ಕೆ ಹೋಗಲಾಗಲಿಲ್ಲ ಮತ್ತೆ ಸಿಕ್ಕಿದಾಗ 'ನಿಂಕ್ಲು ಸಮ್ಮೇಳನೊಂಕು ಬತ್ತಿಯಾರ್' ಎಂದು ಹೇಳಿದ ಪೂಜ್ಯರ ಜ್ಞಾಪಕಶಕ್ತಿ ಸಾವಿರಾರು ಜನರ ನಡುವೆ ನನ್ನ ಅನುಪಸ್ಥಿತಿಯನ್ನು ಗುರುತಿಸಿದ್ದು ನನಗೆ ಆಶ್ಚರ್ಯ. 12ನೇ ವರ್ಷಕ್ಕೆ ಪೂಜ್ಯರ ಒಡನಾಟ. ಅವರು ಹರಿಪಾದ ಸೇರುವ ಎರಡು ವಾರ ಮೊದಲು ಮಂಡಲದ ಕಾರ್ಯದರ್ಶಿಯಾಗಿದ್ದ ನನ್ನನ್ನು ಸನ್ಮಾನಿಸಿ ಆಶೀರ್ವಾದ ಮಾಡಿದ್ದ ನನ್ನ ಗುರುಗಳ ಕೊನೆ ಭೇಟಿ. 'ಮಹಾನ್ ಗುರುಕ್ಕು ನಮೋ ನಮಃ' ಪೂಜ್ಯರೇ.

**–ಬಿ.ರಾಮದಾಸ ತಂತ್ರಿ**

## ಕಲ್ಕಿ ಅವತಾರ



**ಮಟ್ಟಿ ರಾಮಚಂದ್ರ ರಾವ್**

ಪುರಾಣ ಪ್ರಪಂಚದ ಮಾಲಿಕೆಗಾಗಿ ಕಡೆಯ ಚಿತ್ರ ಶ್ರೀಮನ್ನಾರಾಯಣ ಭೂಮಿಯಲ್ಲಿ ಅಧರ್ಮವು ಹೆಚ್ಚುವಾಗ ಧರ್ಮ ಸಂಸ್ಥಾಪನೆಗಾಗಿ ಯುಗಯುಗದಲ್ಲಿಯೂ ಹುಟ್ಟಿ ಬರುತ್ತೇನೆ, ಅವತಾರವನ್ನು ತಾಳುತ್ತೇನೆ ಎಂದು ಹೇಳಿರುವ ಬಗ್ಗೆ ನಮಗೆಲ್ಲರಿಗೂ ಗೊತ್ತಿದೆ. ಅದೇ ರೀತಿ ಕಲಿಯುಗದ ಈ ಅಂತ್ಯ ಭಾಗದಲ್ಲಿ ಅಧರ್ಮ ಹೆಚ್ಚಾದಾಗ ಅಧರ್ಮವನ್ನು ಮೆಟ್ಟಿ ಧರ್ಮವನ್ನು ಸ್ಥಾಪನೆ ಮಾಡುವುದಕ್ಕಾಗಿ ಕಲ್ಕಿ ಅವತಾರವಾಗಿ ಹುಟ್ಟಿ ಬರುತ್ತಾರೆ ಎನ್ನುವಂತಹ ನಂಬಿಕೆ ಇದೆ. ಪ್ರಪಂಚ ಎಲ್ಲವೂ ಧಗಧಗನೆ ಉರಿಯುತ್ತಿರುವಾಗ ಕುದುರೆಯ ಮೇಲೆ ಕತ್ತಿ ಗುರಾಣಿಗಳನ್ನು ಹಿಡಿದುಕೊಂಡಂತಹ ಕಲ್ಕಿ ಅವತಾರದ ಬಿಳಿಯ ಕುದುರೆ ಮೇಲೆ ಬಂದು ಅಧರ್ಮವನ್ನು ಯಾರು ಮಾಡುತ್ತಾರೆ ಅವರನ್ನೆಲ್ಲ ಸಂಹಾರ ಮಾಡಿ ಪ್ರಪಂಚಕ್ಕೆ ಸಕ್ಷೇಮವನ್ನು ಕೊಡುತ್ತಾರೆ ಅನ್ನುವಂತಹ ನಂಬಿಕೆ ಇದೆ. ಈ ಅವತಾರ ಇನ್ನೂ ಆಗಬೇಕಷ್ಟೇ. ತಳ ಭಾಗದಲ್ಲಿ ಕುದಿಯುತ್ತಿರುವಂತಹ ಭೂಮಿ, ಮೇಲ್ಭಾಗದಲ್ಲಿ ಬಿಳಿಯ ಕುದುರೆಯ ಮೇಲೆ ಖಡ್ಗ ಮತ್ತು ಗುರಾಣಿಯನ್ನು ಹಿಡಿದಂತಹ ನಾರಾಯಣನ ಹತ್ತನೇ ಅವತಾರವಾದ ಕಲ್ಕಿಯ ಚಿತ್ರ ಮುಖಪುಟದಲ್ಲಿ ನೀಡಲಾಗಿದೆ.

# ಮಕ್ಕಳಿಗೆ ಕಲಿಯಲು ಯಾವ ಸಂಗೀತ ಬೇಕು?

ಕೆಲವು ವರ್ಷಗಳ ಹಿಂದೆ ನಾನು ನನ್ನ ಸಂಬಂಧಿಕರ ಮನೆಗೆ ಹೋದಾಗ, ಹತ್ತನೆಯ ತರಗತಿಯಲ್ಲಿ ಓದುತ್ತಿದ್ದ ಅವರ ಪ್ರತಿಭಾವಂತೆ ಮಗಳು ತನ್ನ ಶಾಲೆಯ ಕ್ರೀಡಾ ದಿನದ ಕಾರ್ಯಕ್ರಮದಲ್ಲಿ ಒಂದು ವಾದ್ಯ (Trumpet) ನುಡಿಸುತ್ತಿರುವುದಾಗಿ ಹೆಮ್ಮೆಯಿಂದ ಹೇಳಿಕೊಂಡಳು. ಅವಳು ಉತ್ತಮವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಡುತ್ತಿದ್ದರಿಂದ ಕೇವಲ 'ವೆಲ್ ಡನ್' ಎಂದು ಹೇಳಿ ಮುಗಿಸದೆ, ಒಂದೆರಡು ಪ್ರಶ್ನೆ ಕೇಳೋಣ ಎಂದುಕೊಂಡೆ. ನಿಮ್ಮ tune ಯಾವ ರಾಗದಲ್ಲಿದೆ? ಶಂಕರಾಭರಣನ? ಎಂದೆ. ಆಗವಳು ನಗುತ್ತಾ 'ಏನ್ ಅಂಕಲ್ ನೀವು ಇದರಲ್ಲೂ ರಾಗ ನ? ತಮಾಷೆ ಮಾಡ್ತೀರಲ್ವ ಎಂದಳು. ಅವಳಲ್ಲಿ ಆ ಟ್ಯೂನ್ ಅನ್ನು ಹೇಳಿಸಿ ನಂತರ ಅದರ ಸ್ವರ ಸ್ಥಾನಗಳು ಶಂಕರಾಭರಣ ರಾಗದಲ್ಲಿ ಇರುವುದು ಗಮನಕ್ಕೆ ತಂದೆ. ನಾವು ಸಾಮಾನ್ಯವಾಗಿ ಒಂದು ಸಂಗೀತ ಪ್ರಕಾರ ಕಲಿಯುವಾಗ ಇನ್ನೊಂದರ ಬಗ್ಗೆ ಗಮನ ಕೊಡುವುದಿಲ್ಲ. ಒಬ್ಬ ಶಾಸ್ತ್ರೀಯ ಸಂಗೀತದ ಪ್ರವೀಣೆಗೇ ಹೀಗಾಗುವಾಗ ಜನ ಸಾಮಾನ್ಯರಿಗೆ ಕಷ್ಟ ಆಗುವುದು ದೊಡ್ಡದೇ? ಸರಿ, ಹಾಗಿದ್ದರೆ ಯಾವ ಸಂಗೀತ ನಮಗೆ ಬೇಕು?

ಇತ್ತೀಚೆಗಷ್ಟೇ ಬೆಂಗಳೂರಿಗೆ ಬಂದಿದ್ದ ಹೊಸ ದಂಪತಿಯೊಂದು ತಮ್ಮ 8 ವರ್ಷದ ಮಗುವಿಗೆ ಯಾವ ಸಂಗೀತ ಕಲಿಸಬೇಕು ಎಂದು ಚಿಂತಿಸುತ್ತಿದ್ದರು. ನಮ್ಮಲ್ಲಿ ಪೋಷಕರು ಹೆಚ್ಚಾಗಿ Software ಅಥವಾ ಬಿಸಿನೆಸ್‌ನಲ್ಲಿ ತೊಡಗಿಸಿಕೊಂಡಿರುತ್ತಾರೆ. ಮಕ್ಕಳಿಗೆ ಯಾವುದಾದರೂ ಒಂದು ಸಂಗೀತ/ನೃತ್ಯದ ತರಬೇತಿಗೆ ಸೇರಿಸಬೇಕೆಂಬುದು ಅವರ ಇಚ್ಛೆ. ಆದರೆ ಯಾವ ಸಂಗೀತ ಪ್ರಕಾರ? ಎಷ್ಟು ಸಂಗೀತ ಪ್ರಕಾರಗಳಿವೆ ಎಂಬುದು ಗೊತ್ತಿರಬೇಕಾಗಿಯೇನಿಲ್ಲ. ಇನ್ನು ಹಾಡುಗಾರಿಕೆಯೋ ಅಥವಾ ವಾದ್ಯ ಸಂಗೀತವೋ? ವಾದ್ಯವಾದರೆ ಯಾವ ವಾದ್ಯ? ಇಲ್ಲೇ ನಮ್ಮ ಮನೆ ಹತ್ತಿರದ ಸಂಗೀತ ಶಾಲೆಗೇ ಹೋದರೆ ಖಂಡಿತಾ ಬೋಳಿಸಿಕಳಿಸುತ್ತಾರೆ ಎಂಬ ಭಯ ಬೇರೆ. ಯಾರಲ್ಲಿ ವಿಚಾರಿಸುವುದು? ಅಯ್ಯೋ ಅಷ್ಟೆಲ್ಲ ವಿಷಯಗಳಿವೆ. ಅಷ್ಟರಲ್ಲೇ ಅಲ್ಲಲ್ಲಿ ಸಂಗೀತ ಸ್ಪರ್ಧೆಗಳು ಬರುತ್ತಿರುತ್ತವೆ. ಶಾಲೆಯಲ್ಲಿ, ನಮ್ಮ ಬಳಗದಲ್ಲಿ, ಅಪಾರ್ಟ್‌ಮೆಂಟಿನಲ್ಲಿ. ನಮ್ಮ ಮಕ್ಕಳೂ ಭಾಗವಹಿಸಬೇಕೆಂದು ಎಲ್ಲಾ ಪೋಷಕರ ಆಸೆ. ಏನು ಕಲಿಯಬೇಕು? ಕೇವಲ ಒಂದು ಹಾಡನ್ನು ಕಲಿತರೆ ಅಲ್ಲಿಗೆ ಸೀಮಿತವಾಗುವುದಲ್ಲವೇ? ಅದು ಗಣಿತದ ಮಗ್ಗಿಯ (multiplication) ಬದಲು ಕೇವಲ ಎಂಟನೇ ಮಗ್ಗಿ ಮಾತ್ರ ಕಲಿತ ಹಾಗೆ. ಈ ಎಲ್ಲಾ ಪ್ರಶ್ನೆಗಳಿಗೆ ಒಂದು ಪೇಜಿನಲ್ಲಿ ಸಂಪೂರ್ಣವಾಗಿ ವಿವರಿಸುವುದು ಸಾಧ್ಯವಾಗದೆ ಹೋದರೂ ಆದಷ್ಟು ಪ್ರಯತ್ನ ಮಾಡುತ್ತೇನೆ. ಸಣ್ಣ ಮಕ್ಕಳಿಗೆ ತಾವು ಏನು ಕಲಿಯಬೇಕೆಂಬುದರ ಬಗ್ಗೆ ಹೆಚ್ಚೇನೂ ಗೊತ್ತಿರಬೇಕಿಲ್ಲ. ನಮ್ಮ ಶಾಸ್ತ್ರೀಯ ಸಂಗೀತದಲ್ಲಿ ಎರಡು ಬಗೆ – ದಕ್ಷಿಣ ಭಾರತದಲ್ಲಿ ಅತಿ ಹೆಚ್ಚು ಬಳಕೆಯಲ್ಲಿರುವುದು ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಗು ಮಹಾರಾಷ್ಟ್ರ ಉತ್ತರ ಭಾರತದಲ್ಲಿ ಇರುವುದು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ. ಎರಡೂ ಸಂಗೀತ ಪ್ರಕಾರಗಳನ್ನು ಕೇಳಲು ಸಿಗುವುದು ನಮ್ಮ ಕರ್ನಾಟಕ ದಲ್ಲಿ ಮಾತ್ರ. ಹೀಗಾಗಿ ನಮ್ಮಲ್ಲಿ ಇದೊಂದು extra confusion.

ರಿದಮ್‌ನಲ್ಲಿ ಆಸಕ್ತಿ ಇರುವವರು ವಾದ್ಯಗಳ ಪೈಕಿ ಕರ್ನಾಟಕ ಸಂಗೀತ ಇಷ್ಟವಿದ್ದಲ್ಲಿ ಮೃದಂಗ, ಹಿಂದೂಸ್ತಾನಿ ಇಷ್ಟವಿದ್ದಲ್ಲಿ ತಬಲಾದತ್ತ ಹೋಗಬಹುದು. ತಂತಿ (string) ವಾದ್ಯಗಳಾದ ವೀಣೆ, ಸಿತಾರ್, ಪಿಟೀಲು, ಮ್ಯಾಂಡೊಲಿನ್, ಗಿಟಾರ್ ಹಾಗೂ ಗಾಳಿ (wind) ವಾದ್ಯಗಳಾದ ಕೊಳಲು/ಬಾನ್ಸುರಿ ನಿಮ್ಮ ಇಷ್ಟವಾದ ಸಂಗೀತ ಪ್ರಕಾರದ ಮೇರೆಗೆ ಆಯ್ದುಕೊಳ್ಳಬಹುದು. ಹಿಂದೂಸ್ತಾನಿ ಸಂಗೀತ ಇಷ್ಟವಿದ್ದಲ್ಲಿ ಬಾನ್ಸುರಿ, ಸಿತಾರ್, ಸಂತೂರ್, ಸಾರಂಗಿ ಇತ್ಯಾದಿ ಮತ್ತು ಕರ್ನಾಟಕ ಸಂಗೀತ ಇಷ್ಟವಿದ್ದಲ್ಲಿ ವೀಣೆ, ಕೊಳಲು, ಮ್ಯಾಂಡೊಲಿನ್, ಪಿಟೀಲು ಇತ್ಯಾದಿ. ಸಿತಾರ್, ಸಂತೂರ್, ಸರೋದ್ ಇವೆಲ್ಲೂ ಉತ್ತರ ಭಾರತದ ಪ್ರಕಾರವಾದ್ದರಿಂದ ಇಲ್ಲಿ ಕಲಿಯಲು ಗುರುಗಳೂ, ಸಂಪನ್ಮೂಲದ ಕೊರತೆಯೂ ಇರಬಹುದು. ಯಾವುದೂ ಕೇವಲ ಸ್ಪರ್ಧೆಗೆ ಸೀಮಿತವಾಗದೆ ಜ್ಞಾನದ ದೃಷ್ಟಿಯಿಂದ ಶಿಸ್ತಿನಿಂದ ಕಲಿತರೆ ನಿಧಾನವಾಗಿ ಅಭ್ಯಾಸ ಮಾಡುತ್ತಾ ಬೆಳೆಸಿಕೊಂಡು ಬರಬಹುದು. ಹಾಗೆಯೇ ಯಾವ ಪ್ರಕಾರ ಮಕ್ಕಳು ಆಯ್ದುಕೊಂಡರೂ ಪೋಷಕರು ತಮ್ಮ ಮಕ್ಕಳು ಕಲಿಯುವ ಪ್ರಕಾರವನ್ನೇ ಆದಷ್ಟು ಮನೆಯಲ್ಲಿ, mobileನಲ್ಲಿ, youtubeನಲ್ಲಿ, alexaದಲ್ಲಿ ಹಾಕಿದರೆ ಅವರಿಗೂ ಆಸಕ್ತಿ ಹೆಚ್ಚಾಗಿ, ಕಲಿಯಲೂ ಸ್ಫೂರ್ತಿ ಬರುತ್ತದೆ. ಹೊರಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿಯುತ್ತಾ ಮನೆಯಲ್ಲಿ ರಾಕ್ ಮ್ಯೂಸಿಕ್ ಕೇಳುತ್ತ ಕುಳಿತರೆ ಆಸಕ್ತಿ ಬರುವುದಾದರೂ ಹೇಗೆ ಅಲ್ವಾ? ಒಟ್ಟಾರೆ ನಾವು ಕರ್ನಾಟಕ ಸಂಗೀತ ಅಥವಾ ಹಿಂದೂಸ್ತಾನಿ, ಅಥವಾ ಪಾಶ್ಚಾತ್ಯ, ಯಾವ ಸಂಗೀತದ 'ಪ್ರಕಾರ' ಕಲಿಯಬಯಸಿದರೂ 'ಸಂಗೀತ' (music as a whole) ಕಲಿಯುವುದು ಬಹಳ ಮುಖ್ಯ. ಹಾಗೆಯೇ ಇತರ ಪ್ರಕಾರಗಳನ್ನು ತಕ್ಕ ಮಟ್ಟಿಗೆ ತಿಳಿದುಕೊಂಡಲ್ಲಿ ಅದರ ಬಗೆಗಿನ ಗೌರವವೂ ಹೆಚ್ಚುತ್ತದೆ.

**ವಿಶ್ವೇಶ ಭಟ್**

# ಮಹಾ ಶಿವರಾತ್ರಿ

ಮಹಾ ಶಿವರಾತ್ರಿಯು ಹಿಂದೂಗಳ ಪ್ರಮುಖ ಹಬ್ಬಗಳಲ್ಲಿ ಒಂದಾಗಿದೆ. ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ಮಹಾ ಶಿವರಾತ್ರಿ ಹಬ್ಬವನ್ನು ಆಚರಿಸಲಾಗುತ್ತದೆ. ಮಹಾ ಶಿವರಾತ್ರಿಯಂದು ಮಾಡಿದ ಆರಾಧನೆಯಿಂದ ಮನೋ ನಿಯಾಮಕನಾದ ತಾನು ಸಂತುಷ್ಟನಾಗಿ ಭಕ್ತರ ಮನೋಭೀಷ್ಟ ಗಳನ್ನು ಈಡೇರಿಸಿ ಸಕಲ ಪಾಪಗಳನ್ನು ಪರಿಹರಿಸುವೆನೆಂದು ಶಿವನೇ ತನ್ನ ಪತ್ನಿ ಪಾರ್ವತಿಗೆ ಹೇಳಿದನೆಂದು ಪುರಾಣಗಳಲ್ಲಿ ಉಲ್ಲೇಖಗೊಂಡಿದೆ. ಅಭಿಷೇಕ ಮತ್ತು ಬಿಲ್ವಾರ್ಚನೆಯು ಶಿವನಿಗೆ ಅತ್ಯಂತ ಪ್ರಿಯವಾದ ಅರ್ಚನೆಯಾಗಿದೆ. ಅತ್ಯಂತ ಶೀಘ್ರವಾಗಿ ಭಕ್ತರ ಅಭೀಷ್ಟಗಳನ್ನು ಈಡೇರಿಸುವವನು. ಶಿವನೆಂಬುದು ನಮ್ಮ ಪುರಾಣಗಳಲ್ಲಿ ತಿಳಿದುಬರುತ್ತದೆ. ಶಿವರಾತ್ರಿಯ ದಿನದ ಮಹತ್ವವನ್ನು ಅನೇಕ ವಿಧಗಳಲ್ಲಿ, ಪುರಾಣಗಳಲ್ಲಿ ವಿವರಿಸಲಾಗಿದೆ.

ಶಿವ ಪಾರ್ವತಿಯವರ ವಿವಾಹದ ದಿನ ಇದಾಗಿದ್ದು, ದೇವೆಗಳು ಜಾಗರಣೆ ಇದ್ದು ಗಿರಿಜಾ ಕಲ್ಯಾಣವನ್ನು ವೀಕ್ಷಿಸಿದ ದಿನ ಎಂದು ಹಲವೆಡೆ ವಿವರಿಸಿದ್ದಾರೆ. ಸಮುದ್ರ ಮಥನದಲ್ಲಿ ಉತ್ಪತ್ತಿಯಾದ ವಿಷವನ್ನು ಶಿವನು ನುಂಗಿದಾಗ ಪಾರ್ವತಿಯು ವಿಷವನ್ನು ಗಂಟಲಲ್ಲೇ ರಾತ್ರಿ ಇಡೀ ತಡೆ ಹಿಡಿದ ದಿನ ಎಂದು ಕೆಲವೆಡೆ ವಿವರಿಸಲಾಗಿದೆ. ಭಗೀರಥನ ತಪಸ್ಸಿನಿಂದ ಅವತರಿಸಿದ ಗಂಗೆಯನ್ನು ಶಿವನು ತನ್ನ ಜಡೆಯಲ್ಲಿ ಹಿಡಿದುಟ್ಟು ಭಗೀರಥನ ಪ್ರಾರ್ಥನೆಯಂತೆ ಗಂಗೆಯನ್ನು ಇಳೆಗೆ ಹರಿಯಬಿಟ್ಟ ದಿನವೆಂದೂ ಕೆಲವಡೆ ಹೇಳಲಾಗಿದೆ. ಇನ್ನು ಹಲವೆಡೆ ವಿಷ್ಣು ಮತ್ತು ಬ್ರಹ್ಮನಿಗೆ ಲಿಂಗರೂಪಿಯಾಗಿ ದರ್ಶನ ನೀಡಿದ ದಿನವೆಂದೂ, ಬೇಡನು ಮರದಿಂದ ಕಿತ್ತೆಸೆದ ಎಲೆಗಳು ಈಶ್ವರ ಲಿಂಗದ ಮೇಲೆ ಬಿದ್ದು ಅದು ಬಿಲ್ವಾರ್ಚನೆಯಾಗಿ ಶಿವನು ಸಂತುಷ್ಟಗೊಂಡು ಬೇಡನನ್ನು ಉದ್ಧರಿಸಿದ ದಿನವೆಂದೂ ನಂಬಲಾಗಿದೆ.

ಶಿವಪುರಾಣ, ಸ್ಕಂದ ಪುರಾಣ, ಗರುಡ ಪುರಾಣ ಹಾಗೂ ಅಗ್ನಿ ಪುರಾಣಗಳಲ್ಲಿ ಶಿವರಾತ್ರಿಯ ಆಚರಣೆ, ಮಹತ್ವಗಳ ಬಗ್ಗೆ ವಿಸ್ತೃತವಾಗಿ ತಿಳಿಸಲಾಗಿದೆ. ಮಹಾ ಶಿವರಾತ್ರಿಯ ದಿನ ಉಷಃಕಾಲದಲ್ಲಿ ಎದ್ದು ಅಭ್ಯಂಜನ ಮಾಡಿ ಶಿವನಿಗೆ ಅಭಿಷೇಕ, ಬಿಲ್ವಾರ್ಚನೆಗಳಿಂದ ಪೂಜಿಸುವುದು ಸಂಪ್ರದಾಯ. ರುದ್ರ ನಮಕ ಚಮಕಗಳನ್ನು ಪಠಿಸುತ್ತಾ ಆರಾಧಿಸುವುದು ಪೂಜೆಯ ಭಾಗವಾಗಿದೆ. ಇಡೀ ದಿನ ಉಪವಾಸವಿದ್ದು ಯಾಮಕ್ಕೊಂದು ಪೂಜೆಯ ಸಂಪ್ರದಾಯವೂ ಇದೆ.

ಭಾರತದಲ್ಲಿ ಕಾಶಿ, ಗೋಕರ್ಣ, ರಾಮೇಶ್ವರವೇ ಮೊದಲಾದ ಶಿವ ದೇವಾಲಯಗಳಲ್ಲಿ ಹಾಗೂ ಜ್ಯೋತಿರ್ಲಿಂಗ ಕ್ಷೇತ್ರಗಳಲ್ಲಿ ಮಹಾಶಿವರಾತ್ರಿಯ ಆಚರಣೆಯನ್ನು ವಿಜೃಂಭಣೆಯಿಂದ ಆಚರಿಸಿ ಭಕ್ತರು ಪುನೀತರಾಗುತ್ತಾರೆ. 2025ನೇ ಇಸವಿಯ ಕ್ರೋಧಿ ಸಂವತ್ಸರದ ಮಹಾ ಶಿವರಾತ್ರಿಯು ದಿ. 26.2.2025ರಂದು ಬರಲಿದ್ದು, ಭಕ್ತರು ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿ ಶಿವಾನುಗ್ರಹಕ್ಕೆ ಪಾತ್ರರಾಗುವ ಅವಕಾಶ ಇದಾಗಿದೆ.

'ತೈಲಧಾರೆಯಂತೆ ಮನಸುಕೊಡು ಹರಿಯಲ್ಲಿ ಶಂಭೋ'

**ಶಿವಪುರ ಹರಿದಾಸ ಉಪಾಧ್ಯಾಯ**


# ಗಾಯತ್ರಿ ಟೂರ್ಸ್ ಎಂಡ್ ಟ್ರಾವೆಲ್ಸ್

**ಆನಂದ ಬಳಗದ ಸದಸ್ಯರಿಗೆ ವಿಶೇಷ ರಿಯಾಯಿತಿ ನೀಡಲಾಗುವುದು.**



* ವಾರಣಾಸಿ, ಪ್ರಯಾಗ್‌ರಾಜ್, ಅಯೋಧ್ಯಾ, ಕಾಶಿ, ಗಯಾ, ಬುದ್ಧ ಗಯಾ, ಭುವನೇಶ್ವರ, ಕೋನಾರ್ಕ್, ಪುರಿ ಜಗನ್ನಾಥ – ಬೆಂಗಳೂರು – 12 ದಿನಗಳ ಪ್ರವಾಸ ಒಬ್ಬರಿಗೆ ರೂ. 35,000/–
* ವಾರಣಾಸಿ, ಪ್ರಯಾಗ, ಅಯೋಧ್ಯ, ಗಯಾ, ಬುದ್ಧ ಗಯಾ, ವಾರಣಾಸಿ – ಬೆಂಗಳೂರು 8 ದಿನಗಳ ಪ್ರವಾಸ ಒಬ್ಬರಿಗೆ ರೂ.22,000/–
* ದೆಹಲಿ, ಆಗ್ರಾ, ಮಥುರಾ, ವೃಂದಾವನ, ಗೋಕುಲ, ಹರಿದ್ವಾರ, ಬದರೀನಾಥ, ಹೃಷೀಕೇಶ, ಹರಿದ್ವಾರ, – ಬೆಂಗಳೂರು – 13 ದಿನಗಳ ಪ್ರವಾಸ ಒಬ್ಬರಿಗೆ ರೂ.35,000/–

*** ದರದಲ್ಲಿ 3 ಎ.ಸಿ.ಸ್ಲೀಪರ್ ಕ್ಲಾಸ್ ರೈಲು ಪ್ರಯಾಣ, ಎ.ಸಿ.ಟಿ.ಟಿ., ತಂಗಲು ಸೂಪರ್ ಡಿಲಕ್ಸ್ ಎ.ಸಿ.ರೂಮ್, ಊಟ, ತಿಂಡಿ ಎಲ್ಲ ಸೇರುತ್ತದೆ.**

*** Flight Charges Extra.**

**ಹೆಚ್ಚಿನ ವಿವರಗಳಿಗಳಿಗಾಗಿ ಸಂಪರ್ಕಿಸಿ : ಎಂ. ನರಸಿಂಹ ಆಚಾರ್ಯ**

**ಮೊಬೈಲ್ : 7411867696 / 7975879148**

*With Best Compliments from :*

## P.C. RAO

Rao Ideal Services Pvt Ltd

# Rao Ideal Services Pvt Ltd

***Specialists in Staff Outsourcing and Facility Management***

We are specialized in Environmental Maintenance, Staff Outsourcing, Statutory Support, and other corporate services in different sectors like Automobile, Consumer Durable, Healthcare / Medical / R &D, Industrial Products / Heavy Machinery, Manufacturing, Purchase / Logistics / Supply Chain, Hotels Industry, Packaging etc.

No. 63, 5th Cross, Vasanth Nagar
Bangalore - 560 052

+91 - 98444 94630
raoideal@yahoo.co.in

---

**M. K. Gurumurthy**

# G. S. POWER SYSTEMS

**Authorised Dealers For :**

**kirloskar Diesel Generators from 2 KVA to 1500 KVA**

**Since 35 Years.**




**Available Generators for Hiring / Rental**

**#21, 100 Ft. Ring Road, 3rd Cross, 3rd Phase, 6th Block, Banashankari**
**Opp. Brnad Factory, Near Kamakya Theatre, Bangalore - 560 085**
**Phone : 080-26893606 / 26893607**
**Mobile : 9844022692, 7760998652**
**E-mail: info@gspowersystems.com/gspowerblr@gmail.com**

**www.gspowersystems.com**

| LIST OF REGULAR PROGRAMS OF ANANDA BALAGA | |
|---|---|
| **Vasanthotsava** | Cultural wing- May |
| **Ganeshotsava** | Youth wing-September |
| **Durga Namaskara Pooja** | Religious wing-August |
| **Pratibha Mela for children** | Cultural wing-July |
| **Pratibha puraskara & Samskrutika Sanje** | Cultural wing - August |
| **Tulasi sankeerthane** | Religious wing - October |
| **APL/ BPL** | Ananda Balaga November |
| **Calender release** | Youth wing - December |
| **Ananda Milana** | Youth wing - January |
| **Kreeda Milana** | Youth wing - January |
| **One day tour** | Cultural wing-December |
| **Varshikotsava** | Ananda Balaga February |
| **MAHILA VIBHAGA** | |
| **Sharada pooja** | October |
| **Tour** | November / December |
| **Sathya Narayana pooja** | January |
| **Matrimonial service** | Every Saturday |
| **ANANDA BALAGA SERVICES** | |
| **Education Assistance Programme** | |
| **Bhruguvani** | **Quarterly Magazine** |

**ವಿಶೇಷ ಸೂಚನೆ :** ಸಮಯ ಸಂದರ್ಭಾನುಸಾರವಾಗಿ ಕಾರ್ಯಕ್ರಮಗಳಲ್ಲಿ ಬದಲಾವಣೆಯಾಗಬಹುದು.

ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ ವಿನಃ ಸಂಪಾದಕ ಮಂಡಳಿಯದ್ದಲ್ಲ.

ಸ್ಥಳಾಭಾವದ ಕಾರಣದಿಂದಾಗಿ ಕೆಲವು ಲೇಖನಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಲು ಸಾಧ್ಯವಾಗಿಲ್ಲ. ಅವುಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

## ಜನವರಿ 2025ರಿಂದ ಏಪ್ರಿಲ್ 25ರ ಅವಧಿಯ ವಿಶೇಷ ದಿನಗಳು

| ಜನವರಿ | |
|---|---|
| 14, ಮಂಗಳವಾರ | ಮಕರ ಸಂಕ್ರಮಣ |
| 15, ಬುಧವಾರ | ಉತ್ತರಾಯಣ ಆರಂಭ |
| 19, ರವಿವಾರ | ಕ್ರೀಡಾ ಮಿಲನ – 2025 |
| 25, ಶನಿವಾರ | ಏಕಾದಶೀ |
| 29, ರವಿವಾರ | ಅಮಾವಾಸ್ಯೆ |
| 30, ಸೋಮವಾರ | ಮಾಘಮಾಸ, ಶಿಶಿರ ಋತು ಆರಂಭ |
| **ಫೆಬ್ರವರಿ** | |
| 04, ಮಂಗಳವಾರ | ರಥಸಪ್ತಮಿ |
| 06, ಗುರುವಾರ | ಮಧ್ವನವಮಿ |
| 08, ಶನಿವಾರ | ಏಕಾದಶೀ |
| 12, ಬುಧವಾರ | ಕುಂಭ ಸಂಕ್ರಮಣ, ಹುಣ್ಣಿಮೆ |
| 23, ರವಿವಾರ | ಆನಂದ ಬಳಗದ ವಾರ್ಷಿಕೋತ್ಸವ |
| 24, ಸೋಮವಾರ | ಏಕಾದಶೀ |
| 26, ಬುಧವಾರ | ಮಹಾಶಿವರಾತ್ರಿ |
| 27, ಗುರುವಾರ | ಅಮಾವಾಸ್ಯೆ |
| 28, ಶುಕ್ರವಾರ | ಫಾಲ್ಗುಣ ಮಾಸಾರಂಭ |
| **ಮಾರ್ಚ್** | |
| 10, ಸೋಮವಾರ | ಏಕಾದಶೀ |
| 14, ಶುಕ್ರವಾರ | ಮೀನ ಸಂಕ್ರಮಣ, ಹುಣ್ಣಿಮೆ |
| 26, ಬುಧವಾರ | ಏಕಾದಶೀ |
| 29, ಶನಿವಾರ | ಅಮಾವಾಸ್ಯೆ |
| 30, ರವಿವಾರ | ಚಾಂದ್ರಯುಗಾದಿ, ವಿಶ್ವಾವಸು ಸಂವತ್ಸರ, ಚೈತ್ರಮಾಸ, ವಸಂತಋತು ಆರಂಭ |
| **ಏಪ್ರಿಲ್** | |
| 06, ರವಿವಾರ | ಶ್ರೀ ರಾಮನವಮಿ |
| 08, ಮಂಗಳವಾರ | ಏಕಾದಶೀ |
| 12, ಶನಿವಾರ | ಹುಣ್ಣಿಮೆ |
| 13, ರವಿವಾರ | ಮಕರ ಸಂಕ್ರಮಣ |
| 14, ಸೋಮವಾರ | ಸೌರ ಯುಗಾದಿ (ವಿಷ್ಣು) ಸೌರ ವಿಶ್ವಾವಸು ಸಂವತ್ಸರ ಆರಂಭ |
| 24, ಗುರುವಾರ | ಏಕಾದಶಿ |
| 27, ರವಿವಾರ | ಅಮಾವಾಸ್ಯೆ |

(ಆಧಾರ : ಉಡುಪಿ ಶ್ರೀ ಪೂರ್ಣಪ್ರಜ್ಞ ಪಂಚಾಂಗ)

# ಸಭೆ ಸಮಾರಂಭ, ಪ್ರಶಸ್ತಿ



ನಮ್ಮ ಸದಸ್ಯರಾದ ಶ್ರೀ ಮನಮೋಹನ್ ಮತ್ತು ಶ್ರೀಮತಿ ಸಂಧ್ಯಾ ಅವರ ಸುಪುತ್ರ ಚಿ.ರಾ. ನವನೀತ್ ಅವರ ಮದುವೆ ಶ್ರೀ ಕೃಷ್ಣಮೂರ್ತಿ ಆಚಾರ್ಯ ಹಾಗೂ ಶ್ರೀಮತಿ ಸುಮಾ ಅವರ ಸುಪುತ್ರಿ ಚಿ.ಸೌ. ದೀಪ್ತಿಯವರೊಂದಿಗೆ 25.12.24 ರಂದು Samaya Venue and Leisure ರೆಸಾರ್ಟ್‌ನಲ್ಲಿ ಅದ್ದೂರಿಯಾಗಿ ನೆರವೇರಿತು



ಬಳಗದ ಹಿರಿಯ ಸದಸ್ಯರಾದ ಶ್ರೀ ಜಯಪ್ರಕಾಶ್ ರಾವ್ ಅವರಿಗೆ ತಾ. 01.11.2024ರಂದು ಮೈಸೂರು ಜಿಲ್ಲಾಡಳಿತ ಈ ವರ್ಷದ ಕರ್ನಾಟಕ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿಯನ್ನು ಅವರ ಸಾಮಾಜಿಕ ಸೇವೆಯನ್ನು ಪರಿಗಣಿಸಿ ಗೌರವಿಸಿತು.



ಬಳಗದ ಸದಸ್ಯರಾದ ಶ್ರೀ ವಿಶ್ವೇಶ್ ಭಟ್‌ರವರಿಗೆ Extensive Research & Contributions in the field of Indian & World Musicಗಾಗಿ Asian International Culture & research Academy ಸಂಸ್ಥೆಯಿಂದ 27.10.2024ರಂದು ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಆನಂದ ಬಳಗದ ಉಪಾಧ್ಯಕ್ಷರಾದ ಶ್ರೀ ಕೆ.ಎನ್. ಅಡಿಗರವರಿಗೆ ತಾ. 7.12.2024ರಂದು ಅಖಿಲ ಭಾರತ ಬ್ರಾಹ್ಮಣ ಮಹಾ ಸಂಸ್ಥೆಯ ವತಿಯಿಂದ ನಟ ಶ್ರೀ ಶ್ರೀಧರ್ ಅವರಿಂದ ಗೌರವ ಸನ್ಮಾನ.



01.12.2024ರಂದು ಹೊಟೇಲ್ ಅಜಂತಾದಲ್ಲಿ ತಳುವೆರೆಂಕ್ಲು ಸಂಸ್ಥೆಯ ಆಶ್ರಯದಲ್ಲಿ ನಡೆದ ಬಲಿಯೇಂದ್ರ ಪರ್ಬ ಆಚರಣೆಯಲ್ಲಿ ಶ್ರೀ ಜಯಂತ ರಾಯರಿಗೆ ಬಲಿಯೇಂದ್ರ ಪ್ರಶಸ್ತಿ ನೀಡಿ ಗೌರವಿಸಲಾಯಿತು



ಬಳಗದ ಕಾರ್ಯಕಾರಿ ಸಮಿತಿಯ ಧಾರ್ಮಿಕ ವಿಭಾಗದ ಸಂಚಾಲಕ, ಸಮಾಜ ಸೇವಕರಾದ ಶ್ರೀ ಜಯಂತ ರಾವ್ ಹಾಗೂ ಪಾಕ ಪ್ರವೀಣ ಶ್ರೀ ವೆಂಕಟರಾಜು ಭಟ್ ಅವರುಗಳಿಗೆ ತಾ. 10.11.2024ರಂದು ಪೂರ್ಣಿಮಾ ರಿಜೆನ್ಸಿಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಧನ್ವಂತರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಬಳಗದ ಸದಸ್ಯೆ ಶ್ರೀಮತಿ ಮಿತ್ರಾ ವೆಂಕಟರಾಜ್ ಬರೆದ ಪುಸ್ತಕ 'ನನ್ನಕ್ಕ ನಿಲೂಫರ್' ತಾ. 15.12.204ರಂದು ಬೆಂಗಳೂರಿನ ಎನ್.ಆರ್. ಕಾಲೋನಿಯಲ್ಲಿರುವ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ವಿದ್ಯುಕ್ತವಾಗಿ ಲೋಕಾರ್ಪಣೆಗೊಂಡಿತು.



ಬಳಗದ ಸದಸ್ಯ ಶ್ರೀ ಸುಧೀರ್ ರಾವ್ ಹಾಗೂ ಶ್ರೀಮತಿ ಅನೂರಾಧಾ ರಾವ್ ದಂಪತಿಗಳ ಸುಪುತ್ರ 17 ವರ್ಷದ ಸಂಚಿತ್ Common Law Admission Test (CLAT) UG 2025ರಲ್ಲಿ ಕರ್ನಾಟಕಕ್ಕೆ ಮೊದಲ ರ್‍ಯಾಂಕ್ ಹಾಗೂ ದೇಶಕ್ಕೆ 10ನೇ ರ್‍ಯಾಂಕ್ ಗಳಿಸಿದ್ದಾರೆ. ಸಂಚಿತ್ ಅವರಿಗೆ ಅಭಿನಂದನೆಗಳು.

## ಪ್ರತಿಭೆ ಪರಿಚಯ



ಕು. ಶಾರ್ವರಿ ಸೋಮಯಾಜಿ ತನ್ನ 4ನೇ ವರ್ಷದಲ್ಲಿ ವೇದಿಕೆಯಲ್ಲಿ ಸಂಗೀತ ಹಾಡಿದವಳು. ತನ್ನ 12ನೇ ವರ್ಷಕ್ಕೆ ಹರಿಕಥೆ ಹಾಗೂ ಕಥಾ ಕೀರ್ತನೆ ನಡೆಸಿದಳು. ಇವಳಿಗೆ ಕಲಾಶ್ರೀ ಪ್ರಶಸ್ತಿ, ಬಾಲ ಪ್ರತಿಭಾ ಪ್ರಶಸ್ತಿ ಹಾಗೂ ಹಲವಾರು ಪ್ರಶಸ್ತಿಗಳು ಲಭಿಸಿವೆ. ಚಂದನ, ಉದಯ, ಸುವರ್ಣ, ಶಂಕರ ಚಾನೆಲ್‌ಗಳಲ್ಲಿ ಕಥಾ ಕೀರ್ತನೆ ಪ್ರಸರಿಸಿ ಬಹಳ ಜನಪ್ರಿಯಳಾಗಿದ್ದಾಳೆ.

ಇತ್ತೀಚೆಗೆ ಅಮೆರಿಕದ ರಿಚ್ಮಂಡ್ ಟೌನ್‌ನಲ್ಲಿ 'AKKA' ಕನ್ನಡ ಕೂಟದಲ್ಲಿ 'ನರಸಿಂಹ ವಿಜಯ' ಹರಿಕಥೆ ನಡೆಸಿಕೊಟ್ಟು ಅತ್ಯಂತ ಜನಮನ್ನಣೆ ಗಳಿಸಿಕೊಂಡಿರುವಳು. ಪ್ರಸ್ತುತ University of British Colombia & Mischail ಕ್ಯೂಕಿಯೋನ್ ಚೈಲ್ಡ್‌ಹುಡ್ ಕ್ಯಾನ್ಸರ್ ರಿಸರ್ಚ್ ಪ್ರೋಗ್ರಾಮ್ ಅಡಿಯಲ್ಲಿ ಬಿಸಿ. ಚಿಲ್ಡ್ರನ್ಸ್ ಹಾಸ್ಪಿಟಲ್, ಕೆನಡಾದಲ್ಲಿ ಪಿಎಚ್.ಡಿ., ವಿದ್ಯಾರ್ಥಿನಿಯಾಗಿದ್ದಾಳೆ.

ಇವಳು ಆನಂದ ಬಳಗದ ಮಕ್ಕಳ ಕಾರ್ಯಕ್ರಮಗಳಲ್ಲಿ ನಿರೂಪಣೆ, ಹರಿಕಥೆ ಹಾಗೂ ಇತರೆ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಬಳಗದಲ್ಲಿ ಬೆಳೆದ ಒಂದು ಅದ್ಭುತ ಪ್ರತಿಭೆ.



ಆನಂದ ಬಳಗದ ಕಾರ್ಯಕಾರಿ ಸಮಿತಿಯ ಶ್ರೀ ಪ್ರಕಾಶ್ ಭಟ್‌ರವರ ಷಷ್ಟಿಪೂರ್ತಿ ಸಮಾರಂಭವು ಪೂಜೆ, ಹೋಮ-ಹವನಗಳೊಂದಿಗೆ ಅದ್ದೂರಿಯಾಗಿ 15.12.2024ರಂದು ಬಸವನಗುಡಿಯ ಪುತ್ತಿಗೆ ಮಠದಲ್ಲಿ ನಡೆಯಿತು. ಪ್ರಕಾಶ್ ಭಟ್‌ರವರಿಗೆ ಶುಭ ಹಾರೈಕೆಗಳು.



ಪಾಕ ಶಾಸ್ತ್ರ ಪ್ರವೀಣರಾದ ಬಳಗದ ಸಕ್ರಿಯ ಸದಸ್ಯ ಶ್ರೀ ವೆಂಕಟರಾಜ ಭಟ್ ಅವರ ಷಷ್ಟಿಪೂರ್ತಿ ಸಮಾರಂಭ 29.11.2024ರಂದು ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ವಿದ್ಯುಕ್ತವಾಗಿ ನೆರವೇರಿತು.

# VASTHU ARCHITECTS

#213, 8th Cross, Bapuji Layout, Vijayanagar, Bangalore 560040

**VASANTH K BHAT B.Arch.,** M.I.P., (Germany) AIIA, FIV.
**ARCHITECT & VASTU CONSULTANT**

Phone - **080-48512844** Mobile - **09886754471**
Website - **http://www.vaasthuarchitects.com**











**WE DESIGN MODERN CONCEPTS IN CONSONANCE WITH**

**VASTHU PRINCIPLES**

**WE ALSO WORK ON PROJECTS ON A**

**DESIGN BUILD-BASIS**

**FROM CONCEPT - TO - COMPLETION**



**OUR DESIGN BUILD ASSOCIATES**
**ER.SUBRAHMANYA HERLE**
**ENGINEER & CONTRACTOR**


## HERLE BUILD-TECH

"SUMASAM" # 1926, 4th Main, 2nd Cross,
Kengeri Upanagar, Bengaluru - 560060.
E-mail: subramanya74@gmail.com
Mobile: 988082204

**WITH BEST COMPLIMENTS FROM**
**NAINI.V.BHAT**
**INTERNATIONAL & NATIONAL TOUR CONSULTANT**
**MOBILE: 98867544702**

CHARIOT
www.chariotworldtours.com

# MATCH MAKING



P Vittaldas Tantry

It is always a major problem & cause of worry for all the parents to find a suitable match for their grown up children (Boy or girl). They start this exercise when the children attain the age of generally girls at 24 years & boys at 27-28 years. The general practice is to announce and release the horoscopes in the family, relatives, friends and also in some match making centers. This is a very excruciating experience which may take years to find a matching boy or girl of their expectations. In most of the cases the parents go to the known astrologer with both the horoscopes for matching and take his word as final. The approval rate by the astrology will be generally 10% or less. In such cases the parents get frustrated and few years go by before they find a satisfying match.

There are also people who do not attach so much importance for perfect horoscope matching and compromise on this and other parameters gradually which were being insisted in the beginning. In such cases when various proposals come they are not in a position to decide or finalise any proposals. They will be in a dilemma.

In such case this engineering method will come to their help. This is a scientific based decision making technique which is being widely used world over in the Engineering field and defence when there are various options. This technique was developed by a Japanese engineer and famously called "KEPNER & TREGO" Method (KT). This method consists of 3 major constituents :

1. Problem analysis
2. Decision analysis
3. Potential Problem Analysis

Now list out the required parameters from a girl or boy for match making.

1. Same caste
2. Horoscope matching
3. Educated
4. Family background
5. Good looking personality etc.
6. Age difference
7. Height
8. Complexion
9. Employment status / Salary
10. Hobbies / Interests
11. Social behaviour
12. Place of work / City
13. Known person's reference

Having done this now obtain the above information from all the proposals received and start evaluating the same.

**1. Problem Analysis - Must requirement**

In this, please decide 2-3 requirements which are a must & cannot be compromised at all. This is an important decision to be taken jointly by the family but may vary from family to family. Now let us say there are 7 proposals A, B, .... G on hand with almost all the necessary details as above. let us say in one case the must requirements are as follows :

| Parameter | Must Requirement | A | B | C | D | E | F | G |
|---|---|---|---|---|---|---|---|---|
| 1 | Same caste or Sub caste | ✓ | × | ✓ | ✓ | × | ✓ | ✓ |
| 2 | Horoscope matching (At least 50%) | ✓ | × | ✓ | ✓ | ✓ | ✓ | ✓ |
| 3 | Girl or Boy should be doctor | ✓ | ✓ | × | ✓ | ✓ | ✓ | × |

Now, I get 3 choices viz A, D & F Rule out B, C, E & G as they do not satisfy must condition

2. Decision analysis - Evaluation of other parameters.

| Parameter | Weightage Scale 1-10 | Proposal A | | Proposal D | | Proposal F | |
|---|---|---|---|---|---|---|---|
| | | Weightage 1-10 | A | Weightage 1-10 | D | Weightage 1-10 | F |
| 4 | 6 | 8 | 48 | 9 | 54 | 6 | 36 |
| 5 | 8 | 7 | 56 | 8 | 64 | 7 | 56 |
| 6 | 8 | 8 | 64 | 7 | 56 | 7 | 56 |
| 7 | 7 | 8 | 56 | 7 | 49 | 6 | 42 |
| 8 | 7 | 8 | 56 | 6 | 42 | 6 | 42 |
| 9 | 8 | 9 | 72 | 8 | 72 | 7 | 56 |
| 10 | 5 | 6 | 30 | 6 | 30 | 7 | 35 |
| 11 | 6 | 7 | 42 | 7 | 42 | 5 | 30 |
| 12 | 8 | 8 | 64 | 8 | 64 | 7 | 56 |
| 13 | 5 | 6 | 30 | 6 | 30 | 6 | 30 |
| Total | | | 510 | | 503 | | 439 |

**3. Potential Problem Analysis**

Now the candidate "A" with points 518 is selected let us now analyse the strengths & weaknesses of this candidate. The strengths are points scored from 8-10. Weaknesses are points scored less than this.

For "A" The strength are 4,6,7,8,9,& 12

Weaknesses are parameters 5,10,11,& 13

**4. They are 5 Good Looking personality**

10 - Hobbies & Interests

11- Social Behaviour

13 - Persons references

you can decide whether these are compromised or efforts may be made to improve this after marriage.

It is important to note that the accuracy depends entirely on the weightage points after seing and discussing withe the family or the party. This may also be changed form family to family.

Finally this technique may be adopted to decide to buy a vehicle, TV Kalyan Mantap a sing parameters what you expect and where you have multiple choice you can search in Google for more details about this KT technique if interested. Best of luck for all parents struggling to get a satisfactory match.



## Details of New Members of Ananda Balaga From April 1st 2024 to 31st September 2024

| | | NAME OF THE MEMBER | INTRODUCED BY | |
|---|---|---|---|---|
| 01 | MD0622 | Kut1hyar Sripathi Achar Raghupathi | K Shantharama Acharya - MP 18 | Bengaluru |
| 02 | MD0623 | H. V. Shivarama Kedlaya | A. Balakrishna Bhat - DM0303 | Bengaluru |
| 03 | MD0624 | S. Pradeep Kumar Kalkura | B Ramachandra Upadhya - MD 0050 | Mangaluru |
| 04 | MD0625 | Mrs Hithakshi Nagaraj | M K Prasad - LM056 | Bengaluru |
| 05 | MD0626 | K. Vadiraja Upadhya | K N Adiga - DM059 | Bengaluru |
| 06 | MD0627 | Subramanya Rao Ekkar | Mohan Rao M - LM320 | Tipturu |
| 07 | MD0628 | Mrs Ambika Prakash | B Ramachandra Upadhya - MD 0050 | Bengaluru |
| 08 | MD0629 | Vivek P Hande | B Ramachandra Upadhya - MD 0050 | Bengaluru |
| 09 | MP0024 | Sridhara Bhat | B Ramachandra Upadhya - MD 0050 | Bengaluru |
| 10 | MD0630 | T S Narasimha Murthy | K N Adiga - DM059 | Bengaluru |
| 11 | MD0631 | Sukesh Kumar N S | K N Adiga - DM059 | Bengaluru |
| 12 | MD0632 | Nithin Puthige Thotanthillaya | M K Prasad - LM056 | Bengaluru |
| 13 | MD0633 | Nagaraja Aithal | B Ramachandra Upadhya - MD 0050 | Bengaluru |
| 14 | MD0634 | Kiran Karanth D | Manjunath Karanth - GM0081 | Bengaluru |
| 15 | MD0635 | Amogha Rao Y G | Y. Jayanth Rao - DM0228 | Bengaluru |
| 16 | MD0636 | Vishnu H | N. Aravinda Kumar - LM846 | Bengaluru |
| 17 | MD0637 | H.R. Lakshmisha Saralaya | K M Padmavathy - MD0537 | Bengaluru |
| 18 | MD0638 | Lakshmi S Holla | B Ramachandra Upadhya - MD 0050 | Bengaluru |
| 19 | MD0639 | Poornima R Holla | B Ramachandra Upadhya - MD 0050 | Bengaluru |
| 20 | MD0640 | H R Raghavendra Rao | B Ramachandra Upadhya - MD 0050 | Bengaluru |
| 21 | MD0641 | Latha Girish | B Ramachandra Upadhya - MD 0050 | Bengaluru |



*With Best Compliments From*

**Multi-Branded Laptops & Computer Services.**

- Free Pickup & Delivery across Bangalore.
- Genuine Spares used for services.
- Quick, Quality & Economical Service provider.
- Post Service Warranty on parts used.




## E-Avighna IT Services Pvt Ltd

#965, 14th Cross, 16th Main, BSK 2nd Stage, Bangalore - 70.
Mob: 80957 33100
Email : eavighna23@gmail.com

**ಎಂ.ಜಿ.ಎಸ್.ಕೆ**
**ವಧುವರ ಅನ್ವೇಷಣಾ ಕೇಂದ್ರ**
**ಬೆಂಗಳೂರು**

ತ್ರಿಮತಸ್ಥ ಬ್ರಾಹ್ಮಣ ವಧುವರರ ಮಾಹಿತಿಗಾಗಿ 1998ರಿಂದ ಕತ್ರಿಗುಪ್ಪೆಯಲ್ಲಿರುವ ಈ ಸಂಸ್ಥೆಯನ್ನು ಆಸಕ್ತರು ವಿವರಗಳಿಗೆ ಸಂಪರ್ಕಿಸಿ



**ಸುಮಂಗಲ ಎಸ್ ಆಚಾರ್**
9844320328

**Matti RAMACHANDRA RAO**
Artist & Photographer

9448670941

*Namma Ramanne*

- Photography & Videography Service
- Event Photography
- Pre Wedding
- Candid, Family Photos

e-mail : matturao1959@gmail.com



No. 1007, 9th Main,
3rd Cross,
Sinivasanagara,
Bengaluru-50

## ಸದಸ್ಯತ್ವ ವಿಭಾಗ–ಮನವಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆಯನ್ನು ಸದಸ್ಯರಿಗೆ ಬಳಗದಲ್ಲಿ ಲಭ್ಯವಿರುವ ವಿಳಾಸದ ಪ್ರಕಾರ ಕಳುಹಿಸಲಾಗುತ್ತಿದೆ. ಆದರೆ ಪ್ರತಿ ಬಾರಿಯೂ ಕೆಲವೊಂದು ಪ್ರತಿಗಳು ವಿಳಾಸ ಪತ್ತೆಯಾಗದೆ ವಾಪಸ್ಸು ಬರುತ್ತಿವೆ. ಸದಸ್ಯರು ತಮ್ಮ ಮನೆಯ ವಿಳಾಸಗಳನ್ನು ಬದಲಿಸಿದಾಗ, ಹೊಸ ವಿಳಾಸವನ್ನು ಬಳಗಕ್ಕೆ ನೀಡದಿರುವುದು ಇದಕ್ಕೆ ಮುಖ್ಯ ಕಾರಣ. ನಮ್ಮ ತಂಡವು ಹಿಂದೆ ಬಂದಿರುವ ಭೃಗುವಾಣಿಯಲ್ಲಿರುವ ಸದಸ್ಯರ ವಿಳಾಸವನ್ನು ಆಧರಿಸಿ, ಹೊಸ ವಿಳಾಸವನ್ನು ತಿಳಿದುಕೊಳ್ಳುವ ಬಗ್ಗೆ ವಿವಿಧ ರೀತಿಯಲ್ಲಿ ಪ್ರಯತ್ನಿಸುತ್ತಿದೆ, ಕೆಲವು ಸಲ ಯಶಸ್ವಿಯೂ ಆಗಿದೆ.

ಸದಸ್ಯ ಬಾಂಧವರಲ್ಲಿ ನಮ್ಮ ವಿನಂತಿಯೇನೆಂದರೆ, ತಮಗೆ ಪರಿಚಯವಿರುವ ಸದಸ್ಯರು ತಮ್ಮ ಮನೆಯ ವಿಳಾಸವನ್ನು ಬದಲಿಸಿರುವುದು ತಮಗೆ ತಿಳಿದಿದ್ದರೆ, ತಮ್ಮ ಗಮನಕ್ಕೆ ಬಂದಿದ್ದರೆ, ಅವರ ಹೆಸರು, ಹೊಸ ವಿಳಾಸ ಅಥವಾ ಅವರ ಮೊಬೈಲ್ ಸಂಖ್ಯೆಯನ್ನು ನಮಗೆ ತಿಳಿಸಿರಿ. ಅಂತಹ ಸದಸ್ಯರ ಸರಿಯಾದ ವಿಳಾಸವನ್ನು ತಿಳಿದು, ನಮ್ಮಲ್ಲಿರುವ ವಿಳಾಸ ಪಟ್ಟಿಯನ್ನು ಪರಿಷ್ಕರಿಸಲು ಇದರಿಂದ ಅನುಕೂಲ. ಜೊತೆಗೆ ಅವರಿಗೆ ಭೃಗುವಾಣಿಯೂ ತಲುಪುತ್ತವೆ. ವಿಳಾಸ ತಿಳಿಯದೆ ಹಿಂದೆ ಬರುವ ಪ್ರತಿಗಳ ಸಂಖ್ಯೆಯೂ ಕಡಿಮೆ ಆಗುತ್ತದೆ. ಹಾಗೆಯೇ ಸದಸ್ಯರು ತಮ್ಮ ವಿಳಾಸವನ್ನು ಬದಲಿಸಿದಾಗ ದಯವಿಟ್ಟು ನಮಗೆ ದೂರವಾಣಿ/ವಾಟ್ಸಪ್ ಮೂಲಕ ತಿಳಿಸಬೇಕಾಗಿ ಕೋರಿಕೆ.

❖ ❖ ❖

ಬಳಗದ ಸದಸ್ಯರು ತಮಗೆ ಪರಿಚಯವಿರುವ ನಮ್ಮ ಸಮಾಜಕ್ಕೆ ಸೇರಿರುವ ಸ್ನೇಹಿತರು, ಬಂಧು ಬಳಗದವರನ್ನು ಬಳಗದ ಸದಸ್ಯರಾಗಲು ಪ್ರೇರೇಪಿಸಿ ಬಳಗದ ಸದಸ್ಯ ಶಕ್ತಿಯನ್ನು ಹೆಚ್ಚಿಸಬೇಕಾಗಿ ವಿನಂತಿ. ಸದಸ್ಯತ್ವದ ಫಾರಂಗಳು www.anandabalaga.orgಯಲ್ಲಿ ಲಭ್ಯವಿದ್ದು, ಫಾರಂ ಭರ್ತಿ ಮಾಡಿ ನಿಗದಿಪಡಿಸಿದ ಶುಲ್ಕದೊಂದಿಗೆ ಕಚೇರಿಗೆ ಸಲ್ಲಿಸಲು ಕೋರಲಾಗಿದೆ.

❖ ❖ ❖

ಬಳಗದ ಆಜೀವ ಸದಸ್ಯತ್ವ ಹೊಂದಿದ್ದ ದಿವಂಗತರಾದ ಸದಸ್ಯರ ಪತ್ನಿ/ಪತಿ ಹಾಗೂ ಮಕ್ಕಳು ಬಳಗದ ಹೊಸ ಸದಸ್ಯತ್ವವನ್ನು ಪಡೆಯಲು ವಿನಂತಿ. (ಆನಂದ ಬಳಗದ Bye-lawದಲ್ಲಿ ದಿವಂಗತರಾದವರ ಸದಸ್ಯತ್ವವನ್ನು ಅವರ ಹೆಂಡತಿ ಅಥವಾ ಮಕ್ಕಳಿಗೆ ಮುಂದುವರೆಸಲು ಅವಕಾಶವಿರುವುದಿಲ್ಲ)

**ದಿನೇಶ್ ರಾವ್ ಎಂ.,** ಸಂಚಾಲಕರು ಸದಸ್ಯತ್ವ ಅಭಿವೃದ್ಧಿ ವಿಭಾಗ, ಮೊಬೈಲ್: 99456 88955

## ಸಾಮೂಹಿಕ ತುಳಸೀ ಸಂಕೀರ್ತನೆ



ಆನಂದ ಬಳಗದ ಧಾರ್ಮಿಕ ವಿಭಾಗದ ನೇತೃತ್ವದಲ್ಲಿ ದಿನಾಂಕ 04–11–2024ರ ಸೋಮವಾರ ಸಾಯಂಕಾಲ ದೀಪಾವಳಿಯ ಸಾಂದರ್ಭಿಕ ವಿಶೇಷ ಕಾರ್ಯಕ್ರಮವಾಗಿ ಸಾಮೂಹಿಕ ತುಳಸೀ ಸಂಕೀರ್ತನೆಯನ್ನು ಸಂಯೋಜಿಸಲಾಗಿತ್ತು. ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ನಡೆದ ಈ ಅಪರೂಪದ ಕಾರ್ಯಕ್ರಮದಲ್ಲಿ ಆನಂದ ಬಳಗದ ಪರಿಣತ ಸದಸ್ಯರ ತಂಡವು ತುಳಸೀ ಸಂಕೀರ್ತನೆಯನ್ನು ಸಾಂಪ್ರದಾಯಿಕವಾದ ಕುಣಿತದೊಂದಿಗೆ ನಡೆಸಿಕೊಟ್ಟು, ಭಕ್ತಾಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಗಿದೆ. ಬಳಗದ ಸದಸ್ಯರಲ್ಲದೆ ತೌಳವ ಮಾಧ್ವ ಒಕ್ಕೂಟದ ಸದಸ್ಯರು ತುಳಸೀ ಸಂಕೀರ್ತನೆಯಲ್ಲಿ ಬಳಗದ ಜೊತೆ ಸೇರಿ, ತಮ್ಮ ಸೇವೆಯನ್ನು ಅರ್ಪಿಸಿದ್ದಾರೆ. ಭಜನೆ ಮತ್ತು ಸಂಕೀರ್ತನೆಯ ನಂತರ ಪೇಜಾವರ ಮಠಾಧೀಶರಾದ ಪರಮಪೂಜ್ಯ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದರು ತುಳಸೀ ದಾಮೋದರನಿಗೆ ಪೂಜೆ ಮತ್ತು ಮಂಗಳಾರತಿಯನ್ನು ಮಾಡಿದರು. ಆನಂತರ ನೀಡಿದ ಅನುಗ್ರಹ ಸಂದೇಶದಲ್ಲಿ ಪೂಜ್ಯ ಶ್ರೀಪಾದರು, ಆನಂದ ಬಳಗವು ಕಳೆದ ಮೂರುವರೆ ದಶಕಗಳಿಂದ ಸಾಮಾಜಿಕ ಕಳಕಳಿಯ ವಿವಿಧ ಚಟುವಟಿಕೆಗಳ ಜೊತೆಗೆ ಧಾರ್ಮಿಕ ಪ್ರಜ್ಞೆಯನ್ನು ಬೆಳೆಸುವ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿರುವುದು ಸ್ತುತ್ಯಾರ್ಹವಾಗಿದೆ ಎಂದು ಹೇಳಿ, ಬಳಗ ಮುಂದಿನ ದಿನಗಳಲ್ಲಿ ಮತ್ತಷ್ಟು ಪ್ರಗತಿ ಸಾಧಿಸಲಿ ಎಂದು ಆಶೀರ್ವದಿಸಿದರು. ಸಂಕೀರ್ತನೆಯ ನಂತರ ಆಗಮಿಸಿರುವ ಸರ್ವ ಸದಸ್ಯರಿಗೂ ಭರ್ಜರಿಯಾದ ಫಲಾಹಾರದ ವ್ಯವಸ್ಥೆಯನ್ನು ಮಾಡಲಾಗಿತ್ತು. ಪ್ರತಿ ವರ್ಷದಂತೆ ಈ ವರ್ಷವೂ ತುಳಸೀ ಸಂಕೀರ್ತನೆಯ ಕಾರ್ಯಕ್ರಮವನ್ನು ಬಹಳ ಅಚ್ಚುಕಟ್ಟಾಗಿ ಸಂಯೋಜಿಸಿದ ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ ಜಯಂತ ರಾವ್ ಮತ್ತು ಅವರ ಕಾರ್ಯ ತಂಡಕ್ಕೆ ಶ್ಲಾಘನೆಗಳು.

**– ಎಂ. ಸತ್ಯನಾರಾಯಣ ಭಟ್**



ನಿಮ್ಮ
ಯಾವುದೇ ಉದ್ಯಮಕ್ಕೆ
ನಮ್ಮ ಪ್ರೋತ್ಸಾಹ
ನಿರಂತರ

ಕೆಬಿಎಲ್ ಎಂಎಸ್ಎಂಇ
ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ
ಉದ್ಯಮಿಗಳಿಗೆ ಹಣಕಾಸು ಸೌಲಭ್ಯ

ತಾತ್ವಿಕವಾಗಿ ತ್ವರಿತ ಮಂಜೂರಾತಿ
ಗ್ರಾಹಕರ ರಿಯಲ್ ಟೈಮ್ ದೃಢೀಕರಣ
ಅಡಚಣೆ ರಹಿತ ದಾಖಲಾತಿ ಪ್ರಕ್ರಿಯೆ

ನಮ್ಮ ಗ್ರಾಹಕರಿಗೆ
**ಡಿಜಿಟಲ್ ಸಾಲ**
ಅನುಭವದ ಸಬಲೀಕರಣ

ಸ್ವಯಂಚಾಲಿತ ಸಾಲ ಮೌಲ್ಯಮಾಪನ & ಅರ್ಹತೆ
ಆಕರ್ಷಕ ಬಡ್ಡಿ ದರಗಳು
ಸರಳೀಕೃತ ಪ್ರಕ್ರಿಯೆ

ಹೆಚ್ಚಿನ ವಿವರಗಳಿಗೆ ಟೋಲ್ ಫ್ರೀ ನಂ. 1800 425 1444 ಕರೆ ಮಾಡಿ ಅಥವಾ ಸಮೀಪದ ನಮ್ಮ ಶಾಖೆಗೆ ಭೇಟಿ ಕೊಡಿ

*ಷರತ್ತುಗಳು ಅನ್ವಯ

Follow us on : / KarnatakaBank

ಕರ್ಣಾಟಕ ಬ್ಯಾಂಕ್
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 | CIN: L85110KA1924PLC001128 | ಇಮೇಲ್: info@ktkbank.com | ವೆಬ್‌ಸೈಟ್: www.karnatakabank.com







**Available at all Ayurvedic Medical Stores**

Manufactured by

**Bangalore Pharmaceutical & Research Laboratory (P) Ltd.**

No.163, Reservoir Street, Basavanagudi, Bengaluru - 560 004. INDIA

Consumer Care No. : 080-41208661 | Website: www.bprl.in

Bhrugu Vani Kannada-Tulu-English Quarterly KARMUL/2021/79912 Bengaluru, October-December 2024 No. of Pages : 40 (40+4)




If undelivered please return to:
Ananda Balaga
Ananda Sabha Gruha
23, Gollahalli, Bannerghatta Main Rd
Bannerghatta, Bengaluru-560 083

Bhrugu Vani - Printed & Published by P.S. Bagilthaya, on behalf of Ananda Balaga, Printed at Omkar Offset Printers, 3/3, 1st Main Road, New Tharagupet, Bengaluru - 560 002. Published at Ananda Balaga. 23, Gollahalli, Bannerghatta Main Road, Bengaluru - 560083. Editor : M. Krishna Prasad